ಸಂಚಿಕೆ
೧೩
ನವೆಂಬರ್, ೨೦೧೬

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




## ವಿಧಾನಸೌಧ – ವಜ್ರ ಮಹೋತ್ಸವ






Copyright © KCO – Brindavana

ಸಂಚಿಕೆ
೧೩
ನವೆಂಬರ್, ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಈ ಸಂಚಿಕೆಯಲ್ಲಿ....


| | | | |
|---|---|---|---|
| ಸಂಪಾದಕೀಯ | ಪು ೧ | ದೀಪಾವಳಿ ಹಬ್ಬ | ಪು ೬-೮ |
| ಅಭಿಮಾನಿ ತಂಡದ ನುಡಿ | ಪು ೨ | ನನ್ನ ಅನುಭವ | ಪು ೯ |
| ಹಿನ್ನೋಟ | ಪು ೩ | ರಾಜ್ಯೋತ್ಸವ | ಪು ೧೦-೧೧ |
| ಧರ್ಮವಾಣಿ | ಪು ೪-೫ | ಅಂಕಣ | ಪು ೧೨-೧೩ |
| ರಸಪ್ರಶ್ನೆ | ಪು ೧೪ | ನಾವು ನೋಡಿದ ಸಿನಿಮಾ | ಪು ೧೪ |




ಸತ್ಯ ಪ್ರಸಾದ್
ಪ್ರಧಾನ ಸಂಪಾದಕರು



ರಾಘವೇಂದ್ರ ಕುಂದಲಗುರ್ಕಿ
ಸಂಪಾದಕರು



ಭಾಸ್ಕರ ತೈಲಗೇರಿ
ಸಂಪಾದಕ ವರ್ಗ



ಅನಿಲ್ ಭಾರಧ್ವಾಜ
ಸಂಪಾದಕ ವರ್ಗ



ಪ್ರಶಾಂತ ಎಂ.
ಸಂಪಾದಕ ವರ್ಗ



ಅಮೂಲ್ಯ ಕಟ್ಟೀಮನಿ
ಸಂಪಾದಕ ವರ್ಗ

ಮುಖಪುಟ ಮತ್ತು ಸಂಪಾದಕೀಯ ಪುಟ ಚಿತ್ರ:
ವಿಧಾನಸೌಧ, ಕರ್ನಾಟಕ

ಚಿತ್ರ ಕೃಪೆ : ಅಂತರ್ಜಾಲ

## ಪ್ರಧಾನ ಸಂಪಾದಕರಿಂದ......

**ಬೃಂ**ದಾವನ ಬಳಗಕ್ಕೆ ದೀಪಾವಳಿಯ ಮತ್ತು ಕನ್ನಡ ರಾಜ್ಯೋತ್ಸವದ ಶುಭಾಶಯಗಳು !!!

ದೀಪಾವಳಿ ಎಂದಾಕ್ಷಣ ಕಣ್ಣ ಮುಂದೆ ಬರುವ ಚಿತ್ರ, ನಾವು ಹುಟ್ಟಿ ಬೆಳೆದ ನಮ್ಮ ಹಳೆಯ ಮನೆಗಳು, ಮುಂದಿನ ಕಟಾಂಜನ, ಅದರ ಸುತ್ತ ಹಣತೆಯ ದೀಪಗಳು, ಮನೆ ಮುಂದೆ ರಂಗು ರಂಗಿನ ಬಟ್ಟೆ ತೊಟ್ಟು ಸಂಭ್ರಮದಿಂದ ಪಟಾಕಿಗಳನ್ನು ಸಿಡಿಸುತ್ತಿರುವ ಮಕ್ಕಳು, ಸಿಹಿ ಊಟ, ನೆಂಟರಿಷ್ಟರು, ಸಂಭ್ರಮ ಇತ್ಯಾದಿ. ಪುರಾಣದ ಪ್ರಕಾರ ದೀಪಾವಳಿ ಹಬ್ಬದ ಸಾಲು, ನರಕ ಚತುರ್ದಶಿ, ಲಕ್ಷ್ಮಿ ಪೂಜೆ ಮತ್ತು ಬಲಿ ಪಾಡ್ಯಮಿ. ಅಶ್ವಯುಜ ಕೃಷ್ಣಚತುರ್ದಶಿಯ ಕಗ್ಗತ್ತಲಿನಲ್ಲಿ ಶ್ರೀಕೃಷ್ಣನು ಲೋಕಕಂಟಕನಾದ ನರಕಾಸುರನನ್ನು ಸಂಹಾರ ಮಾಡುತ್ತಾನೆ. ಮಾರನೆಯ ದಿನ ಅಮಾವಾಸ್ಯೆ ಮಹಾ ಲಕ್ಷ್ಮಿ ಪೂಜೆ. ನಂತರದ ದಿನ, ದಾನ ಶೂರ ಬಲಿ ಚಕ್ರವರ್ತಿಯನ್ನು ವಾಮನ ರೂಪದಲ್ಲಿ ಶ್ರೀ ವಿಷ್ಣುವು ಮೂರನೇ ಹೆಜ್ಜೆಯಲ್ಲಿ ಪಾತಾಳಕ್ಕೆ ತುಳಿದು ಚಿರಂಜೀವಿ ವರವನ್ನು ಕರುಣಿಸುತ್ತಾನೆ. ಸೂಕ್ಷ್ಮವಾಗಿ ಅವಲೋಕಿಸಿದರೆ ದೀಪಾವಳಿ ಬೆಳಕಿನ ಹಬ್ಬ, ಕತ್ತಲನ್ನು ಹೊಡೆದೋಡಿಸಿ ದುಷ್ಟ ಸಂಹಾರದೊಂದಿಗೆ ಲಕ್ಷ್ಮಿ ಕಟಾಕ್ಷ ಮತ್ತು ವಿಜಯ ಸಂಕೇತದೊಂದಿಗೆ ಬೆಳಕಿನೆಡೆಗೆ ಸಾಗುವ ಹಬ್ಬ. ದೀಪಾವಳಿ ಬೃಂದಾವನ ಕನ್ನಡ ಬಳಗದ ಪ್ರತಿಯೊಬ್ಬರ ಬೆಳಕಿನ ಹಬ್ಬವಾಗಲೆಂದು ವಾಣಿ ತಂಡ ಹಾರೈಸುತ್ತದೆ.

ಹೀಗೆ ಇತಿಹಾಸದ ಪುಟಗಳನ್ನು ತಿರುವಿ ಹಾಕುತ್ತಿದ್ದೆ, ೧೯೦೫ ರಲ್ಲೇ ಕನ್ನಡ ಕುಲಪುರೋಹಿತರಾದ ಆಲೂರ್ ವೆಂಕಟರಾವ್ ಕರ್ನಾಟಕ ಏಕೀಕರಣ ಚಳುವಳಿಯನ್ನು ಪ್ರಾರಂಭಿಸುತ್ತಾರೆ. ಭಾರತ ಗಣರಾಜ್ಯವಾದ ನಂತರ ಭಾಷಾವಾರು ವಿಂಗಡಣೆಯಲ್ಲಿ ಅನಕ್ಕ, ಕೆ. ಶಿವರಾಮ ಕಾರಂತ, ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎ.ಎನ್.ಕೃಷ್ಣರಾವ್, ಡಿ ವಿ ಜಿ ಮತ್ತು ಬಿ.ಎಂ.ಶ್ರೀಕಂಠಯ್ಯ ಅವರ ಹೋರಾಟದೊಂದಿಗೆ ನಮ್ಮ ಈಗಿನ ಕರ್ನಾಟಕ ರಾಜ್ಯವು ೧೯೫೬ರ ನವೆಂಬರ್ ೧ ರಂದು ಉದಯವಾಗುತ್ತದೆ, ಅದರ ಸಂಕೇತವೇ ನಮ್ಮ ಹೆಮ್ಮೆಯ ಕನ್ನಡ ರಾಜ್ಯೋತ್ಸವ. ಆದರೆ ಮೊನ್ನೆಯ ಒಂದು ಸಂದರ್ಶನದಲ್ಲಿ, ಬೆಂಗಳೂರಿನ ಸುಮಾರು ಮಕ್ಕಳನ್ನು ಡಿ ವಿ ಜಿ, ಅನಕ್ಕ ಯಾರೆಂದು ಕೇಳಿದಾಗ ಬಂದ ಉತರ 'ಡಿ ವಿ ಜಿ ರಸ್ತೆ' ಇದು ನಮ್ಮ ಇಂದಿನ ದೌರ್ಭಾಗ್ಯ.

ಒಂದು ಸಂತೋಷದ ವಿಷಯ, ನಾನು ವೈಯಕ್ತಿಕವಾಗಿ ತುಂಬಾ ಗೌರವಿಸುವ, ತುಂಬಾ ಓದಿಕೊಂಡಿರುವ ಶ್ರೀ ಎಂ. ಜಿ. ಪ್ರಸಾದರು 'ಧರ್ಮ ವಾಣಿ' ಎನ್ನುವ ಅಂಕಣವನ್ನು ಪ್ರಾರಂಭಿಸಿದ್ದಾರೆ. ಅಜ್ಜ ಹಾಕಿದ ಆಲದ ಮರಕ್ಕೆ ಜೋತುಬೀಳದೆ, ಪ್ರತಿಯೊಂದನ್ನು ಪ್ರಶ್ನಿಸಿ, ವಿಮರ್ಶಿಸಿ ಸನಾತನ ಧರ್ಮವನ್ನು ಎಳೆ ಎಳೆಯಾಗಿ ಬಿಡಿಸಿ ನಮ್ಮಂಥ ಪಾಮರರಿಗೂ ಅರ್ಥ ಮಾಡಿಸುತ್ತಿದ್ದಾರೆ, ವಾಣಿ ಬಳಗದ ಅನಂತ ಧನ್ಯವಾದಗಳು.

ಈ ತಣ್ಣನೆ ಹೊತ್ತಿನಲ್ಲಿ ನೆನೆಸಿಕೊಳ್ಳಬೇಕಾದ ಮತ್ತೊಂದು ಹೆಸರು ಪದ್ಮ ಚಿಕ್ಕೇರೂರ್. ಬೆಂಗಳೂರಿನ ಪ್ರತಿಷ್ಠಿತ ವಿದ್ಯಾವರ್ಧಕ ಶಾಲೆಯಲ್ಲಿ ಮೂರು ದಶಕಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿ ಸಾವಿರಾರು ಮಕ್ಕಳಿಗೆ ವಿದ್ಯಾರ್ಜನೆ ಮಾಡಿ, ಮೂರು ಬಾರಿ 'ಉತ್ತಮ ಶಿಕ್ಷಕಿ' ಪ್ರಶಸ್ತಿಯನ್ನು ಪಡೆದಿದ್ದಾರೆ. ವಿದ್ಯಾರ್ಥಿಗಳು ಗುರುಗಳ ಬಗ್ಗೆ ಬರೆದ ಲೇಖನಗಳನ್ನು ಈವರೆಗೆ ಓದಿದ್ದೆ, ಆದರೆ ವಿದ್ಯಾರ್ಥಿಗಳ ಬಗ್ಗೆ ಹೆಮ್ಮೆಯಿಂದ ಬರೆದ ಇವರ 'ಹೊನ್ನ ಹೂಗಳು' ಪುಸ್ತಕವೇ ಇವರ ಮಾತೃ ವಾತ್ಸಲ್ಯಕ್ಕೆ ಸಾಕ್ಷಿ. ಅಪಾರ ಅನುಭವ ಮತ್ತು ಪಾಂಡಿತ್ಯವುಳ್ಳ ಇವರು ನಮ್ಮ ಸಾಹಿತ್ಯ ಚಟುವಟಿಕೆಗಳಿಗೆ ಆಸರೆಯಾಗಿದ್ದಕ್ಕೆ ಬೃಂದಾವನ ಸಾಹಿತ್ಯ ಬಳಗ ಎಂದಿಗೂ ಅವರಿಗೆ ಚಿರಋಣಿ.

ಎಂದಿನಂತೆ ವಾಣಿ ತಂಡ ಅತ್ಯಂತ ಮುತುವರ್ಜಿಯಿಂದ ಸಂಚಿಕೆಯನ್ನು ಅತ್ಯಂತ ಸುಂದರವಾಗಿ ಸಿದ್ಧಪಡಿಸಿದೆ, ತಂಡಕ್ಕೆ ನನ್ನ ಧನ್ಯವಾದಗಳು.

ಮುಂದಿನ ಸಂಚಿಕೆಯಲ್ಲಿ ಸಿಗೋಣ

*-ಸತ್ಯ*

## ಸಂಪಾದಕರಿಂದ......

**ವಿ**ಶ್ವ ವಿಖ್ಯಾತ ಕರ್ನಾಟಕ ವಿಧಾನಸೌಧದ ವಜ್ರಮಹೋತ್ಸವದ ಸುಸಂದರ್ಭದಲ್ಲಿ ಅಭಿಮಾನಿ ತಂಡದ ಬೃಂದಾವನ ವಾಣಿಯಿಂದ ಹೃದ್ಪೂರ್ವಕ ಶುಭಾಶಯಗಳು ಹಾಗು ಕನ್ನಡ ಓದುಗರೆಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

“ಸರ್ಕಾರದ ಕೆಲಸ ದೇವರ ಕೆಲಸ” ಎಂದು ಬಾಗಿಲು ತೆಗೆಯುವ ಈ ರಾಜ್ಯಾಂಗದ ದೇಗುಲ, ೧೯೫೧, ಜುಲೈ ೧೩ ರಂದು ಭಾರತದ ಪ್ರಧಾನಮಂತ್ರಿಗಳಾದ ಶ್ರೀ ಜವಾಹರಲಾಲ್ ನೆಹರು ಅವರಿಂದ ಶಂಕುಸ್ಥಾಪನೆಗೊಂಡ ಭವ್ಯ ಸೌಧ, ಅಂದಿನ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿ ಅವರು ಇದು ಇಂದಿನ ಅಠಾರ ಕಛೇರಿಯಂತೆ (ಹೈಕೋರ್ಟ್) ಇರಬೇಕೆಂದು ಬಯಸಿದ್ದರು. ನಂತರ ಬಂದ ಮುಖ್ಯಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯನವರು ಬಹಳ ಮುತುವರ್ಜಿಯಿಂದ ಹಲವಾರು ದೇಶಗಳ ಪ್ರವಾಸ ಮಾಡಿ, ಅಲ್ಲಿನ ವಿವಿಧ ರೀತಿಯ ವಾಸ್ತುಶಿಲ್ಪವನ್ನು ನೋಡಿ, ಇಂದಿನ ವಿಧಾನ ಸೌಧದ ರೂಪು ರೇಷೆ ಸಕಾರಗೊಳಿಸಿ, ಕಾರಗೃಹದ ೫೦೦೦ ಖೈದಿಗಳಿಗೂ ಮೇಲ್ಪಟ್ಟು ಬಂಧಿತರಿಂದ ೫ ವರ್ಷಗಳ ಕಾಲ ೧.೫ ಕೋಟಿ ರೂಪಾಯಿಗಳಲ್ಲಿ ನಿರ್ಮಾಣಗೊಂಡ, ಈ ಮಹಾ ಕಟ್ಟಡ ಭಾರತದ ಎಲ್ಲ ರಾಜ್ಯಗಳ ವಿಧಾನಸೌಧಗಳ ರಾಜ ಎಂದರೆ ತಪ್ಪಾಗಲಾರದು.

ವಿಧಾನಸೌಧವನ್ನು ಒಳ ಭಾಗದಿಂದ ನೋಡುವ ಅವಕಾಶ ಕಳೆದ ವರ್ಷದಲ್ಲಿ ನನಗೆ ಸಿಕ್ಕಿತು. ಬೃಹದಾಕಾರದ ಮಹಾತ್ಮ ಗಾಂಧಿಯ ಪ್ರತಿಮೆ, ಅಪ್ರತಿಮ ಕಲಾಕೌಶಲ್ಯ ಭರಿತ ಸುಂದರ ಬಾಗಿಲು, ಕಂಭಗಳು ಎಂತವರನ್ನು ಮಂತ್ರ ಮುಗ್ಧರನ್ನಾಗಿಸುವುದು. ಇದರೆಲ್ಲರ ನಡುವೆ ರಾಜಕೀಯ ಪಕ್ಷಗಳ ನಡುವೆ ನಡೆಯುವ ರಾಜಕೀಯ ಹಣಾ-ಹಣಿಗೆ ಸಾಕ್ಷಿಯಾಗಿ ಬೆಂಗಳೂರು ನಗರದ ಮಧ್ಯ ಭಾಗದಲ್ಲಿ ಕನ್ನಡದ ಕೋಟಿ ಕೋಟಿ ಜನಗಳ ಪ್ರಜಾಪ್ರಭುತ್ವದ ಕುರುಹಾಗಿ ನಿಂತಿದೆ.

ಪ್ರತಿ ವರುಷ ನವಂಬರ್ ನಲ್ಲಿ ಕನ್ನಡ ರಾಜ್ಯೋತ್ಸವ, ಕನ್ನಡದ ಕಂಪನ್ನು ಎಲ್ಲೆಡೆ ಹರಡುತ್ತದೆ. ಪ್ರತಿ ದಿನವೂ ಈ ಕನ್ನಡದ ಕಂಪು ನಮ್ಮನ್ನು ಆವರಿಸಬೇಕು. ಕನ್ನಡದ ಮೊದಲ ಹೋರಾಟ ನಾವು ಮನೆಯಲ್ಲಿ ಎಲ್ಲರೊಡನೆ ಮಾತಾಡುವುದೇ ಆಗಿದೆ. ಆ ಕನ್ನಡದ ಸೊಗಡಿನಲ್ಲಿ ಬೆಳೆಯುವ ಮಕ್ಕಳು ಮುಂದೆ ಕವಿ ಬೇಂದ್ರೆಯೋ, ಕಾರಂತರೋ ಆಗಲು ಒಂದು ಮುಖ್ಯ ಮೈಲಿಗಲ್ಲು. ಬೃಂದಾವನ ಕನ್ನಡ ಶಾಲೆಗೆ ನಿಮ್ಮ ಮಕ್ಕಳನ್ನು ಸೇರಿಸಿ, ಈ ಅಭಿಯಾನದಲ್ಲಿ ನಿಮ್ಮ ಮಕ್ಕಳು ಪಾಲ್ಗೊಳ್ಳಲಿ.

ಮತ್ತೊಂದು ಸಂತೋಷದ ವಿಷಯವೆಂದರೆ “ಬೃಂದಾವನ ವಾಣಿ” ಗೆ ಮೂರರ ಸಂಭ್ರಮ. ನಿಮ್ಮೆಲ್ಲರ ಪ್ರೀತಿ ಅಭಿಮಾನಗಳೇ ವಾಣಿಗೆ ರಕ್ಷೆ.

ಇದೇ ರೀತಿ ನಿಮ್ಮೆಲ್ಲರ ಪ್ರೋತ್ಸಾಹ ಹೆಚ್ಚು, ಹೆಚ್ಚು ಮುಂದುವರಿಯಲಿ. ಇನ್ನು ಹೆಚ್ಚಿನ ರೀತಿಯಲ್ಲಿ ಕಥೆ, ಕವನ, ಚುಟಕ ಮುಂತಾದ ಲೇಖನಗಳನ್ನು ಕಳಿಸಿ. ವಾಣಿಯನ್ನು ಬೆಳೆಸಿ. ಮುಖ್ಯವಾಗಿ ನಿಮ್ಮ ಅನಿಸಿಕೆಗಳನ್ನು ನಮಗೆ ಬರೆದು ತಿಳಿಸಿ.

ಇದು ಬೃಂದಾವನ ವಾಣಿ ಇನ್ನೂ ಉತ್ತಮವಾಗಿ ಬೆಳೆಯಲು ಬಹಳ ಸಹಕಾರಿಯಾಗಲಿದೆ.

ಮತ್ತೊಮ್ಮೆ ಸಿಗೋಣ ,

*-ರಾಘವೇಂದ್ರ ಕುಂದಲಗುರ್ಕಿ*

**“ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ ”**



Copyright © KCO – Brindavana

ಸಂಚಿಕೆ
೧೩
ನವೆಂಬರ್, ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಅಭಿಮಾನಿ ತಂಡದ ನುಡಿ

### "ಕನ್ನಡದ ಸ್ನೇಹ, ಸಂಭ್ರಮ, ಸಮ್ಮಿಲನಗಳ ಒಂದು ವರ್ಷ....."



**ನ್ಯೂಜೆರ್ಸಿ** ಕನ್ನಡ ಸ್ನೇಹಿತರಿಗೆಲ್ಲ ಅಭಿಮಾನಿ ತಂಡದ ಸ್ನೇಹ ಪೂರ್ವಕ ನಮಸ್ಕಾರಗಳು.

ನೋಡು ನೋಡುತ್ತಿರುವಂತೆ ೨೦೧೭ರ ಡಿಸೆಂಬರ್ ಬಂದೇ ಬಿಟ್ಟಿತು. ಮನೆಯ ಮುಂದಿರುವ ಮರದ ಎಲೆಗಳು ಶರತ್ಕಾಲದ ಚಳಿಗೆ ಉದುರಿದಂತೆಲ್ಲ, ಈ ವರ್ಷದ ಬೃಂದಾವನ ಕಾರ್ಯಕ್ರಮಗಳು ಕಣ್ಣ ಮುಂದೆ ತೇಲುತ್ತ ಹೋದವು. ವರ್ಷದ ಡೈರಿಯ ಪುಟಗಳನ್ನು ತಿರುಗಿಸಿದಂತೆ, ಯಶಸ್ಸಿನ ಕಾಣಿಕೆ ನೀಡಿದ ಕಾಲಕ್ಕೆ, ಮನಸ್ಸು ನಮಿಸುತ್ತ ತುಂಬಿ ಬಂತು. ಎಂಟು ನೂರಕ್ಕೂ ಹೆಚ್ಚು ನ್ಯೂಜೆರ್ಸಿ ಕನ್ನಡಿಗರು ಭಾಗವಹಿಸಿ ಎಲ್ಲ ಕಾರ್ಯಕ್ರಮಗಳಿಗೆ ಜೀವ ತುಂಬಿದ್ದೀರಿ. ಅಭಿಮಾನಿ ತಂಡದ ಎಲ್ಲ ಕಾರ್ಯಕ್ರಮಗಳ ಯಶಸ್ಸಿನ ಹಿಂದೆ ಬೆನ್ನೆಲುಬಾಗಿ ನಿಂತು ಸಲಹೆ ಸಹಕಾರ ನೀಡಿದ ನಿಮ್ಮೆಲ್ಲರಿಗೂ ಪ್ರೇಮ ಪೂರ್ವಕ ವಂದನೆಗಳು.

ಯುಗಾದಿ ಹಬ್ಬದೊಂದಿಗೆ ಪ್ರಾರಂಭವಾದ ನಮ್ಮ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೇಸಿಗೆಯ ಪಿಕ್ನಿಕ್, ಗಣೇಶೋತ್ಸವದೊಂದಿಗೆ ಮುಂದುವರಿದಿವೆ. ಪ್ರತಿಯೊಂದು ಕಾರ್ಯಕ್ರಮದಲ್ಲೂ ವಿಶೇಷತೆ ಉಳಿಸಿಕೊಂಡು ಬಂದಿದ್ದೇವೆ. ಯುಗಾದಿ ಹಬ್ಬದಲ್ಲಿ ಶ್ರೀಮತಿ ಬಿ. ಆರ್. ಛಾಯ ಮತ್ತು ಶ್ರೀ ಜಗ್ಗೇಶ್ ಭಾಗವಹಿಸಿದರೆ, ಗಣೇಶೋತ್ಸವದಲ್ಲಿಯಂತೂ ವೇಷ ನಾಟಕ, ಶ್ರೀಮತಿ ಸುಧಾ ಬರಗೂರ್ ರವರಿಂದ ಸಾಹಿತ್ಯ ಬೃಂದಾವನ, ತಬಲಾ ನಾಣಿ, ತರಂಗ ವಾದ್ಯ ತಂಡ. ಒಂದಕ್ಕಿಂತ ಒಂದು ಕಾರ್ಯಕ್ರಮಗಳು ಮೆರಗು ಕೊಟ್ಟವು. ಇದರೊಂದಿಗೆ ನಮ್ಮ ನ್ಯೂಜೆರ್ಸಿ ಕಲಾವಿದರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಪ್ರತಿಭೆ ಪ್ರದರ್ಶಿಸಿದ್ದು ಅತ್ಯಂತ ಶ್ಲಾಘನೀಯ. ಯುಗಾದಿ ಹಬ್ಬವೊಂದರಲ್ಲೇ ೧೭೦ ಸ್ಥಳೀಯ ಕಲಾವಿದರು ಭಾಗವಹಿಸಿದ್ದು ಹೆಮ್ಮೆಯ ವಿಷಯ. ಬೇಸಿಗೆಯ ಪಿಕ್ನಿಕ್ ಅಂತೂ ಮಜವೋ ಮಜಾ. ಕ್ರಿಕೆಟ್ ಟೂರ್ನಮೆಂಟ್, ಚಿಕ್ಕವರಿದ್ದಾಗ ಆಡುತ್ತಿದ್ದ ಶಾಲಾ ಕ್ರಿಕೆಟ್ ನೆನಪಿಗೆ ತಂತು.

ಸಾಹಿತ್ಯ ಬೃಂದಾವನದ ಆಶ್ರಯದಲ್ಲಿ ಬಿಡುಗಡೆಯಾದ "ಬದುಕು ಜಟಕಾ ಬಂಡಿ" ಪುಸ್ತಕದ ಬಗ್ಗೆ ಈಗಲೂ ಉತ್ತಮ ಅಭಿಪ್ರಾಯಗಳು ಬರುತ್ತಲೇ ಇವೆ. ಇದೊಂದು ಬದುಕಿನ ಅನುಭವಗಳ ಸಂಕಲನ. ಖಂಡಿತ ಓದಿ, ನಿಮ್ಮ ಮನಸ್ಸು ಕಾಲದ ಆಳದ ಅನುಭವಗಳನ್ನ ನೆನಪು ಮಾಡಿಕೊಂಡೀತು. ಕವಿ ನಿಸ್ಸಾರ್ ಅಹ್ಮದ್ ರವರು ಮುನ್ನುಡಿ ಬರೆದ ಆ ಸಂದರ್ಭದಲ್ಲಿ ಅವರು ಗಮನವಿಟ್ಟು ಪ್ರತಿಯೊಂದು ಹಂತದಲ್ಲೂ ನಡೆದುಕೊಂಡ ರೀತಿ. ಎತ್ತರಕ್ಕೆ ಬೆಳೆದಷ್ಟೂ ದೊಡ್ಡವರ ಸಣ್ಣ ವಿಷಯಗಳ ಬಗೆಗಿನ ಗಮನ, ಶ್ರದ್ಧೆ, ಬೆರಗು ಮೂಡಿಸಿ ಜೀವನದಲ್ಲಿ ಒಂದು ಪಾಠ ಕಲಿಸಿತು.

ಈ ವರ್ಷದ ಕೊನೆಯ ಕಾರ್ಯಕ್ರಮ "ಬೃಂದಾವನ ವಾರ್ಷಿಕೋತ್ಸವ ಮತ್ತು ಮಕ್ಕಳೋತ್ಸವ" ವನ್ನು ಡಿಸೆಂಬರ್ ೧೦ ರಂದು ಈಸ್ಟ್ ಬ್ರುನ್ಸ್ವಿಕ್ ಪ್ರೌಢ ಶಾಲೆಯ ಸಭಾಂಗಣದಲ್ಲಿ ಏರ್ಪಡಿಸಿದ್ದೇವೆ, ಖಂಡಿತ ಬನ್ನಿ, ಭಾಗವಹಿಸಿ. ಸುಸಜ್ಜಿತ ರಂಗ ಮಂದಿರ, ವಿಶಾಲವಾದ ಡೈನಿಂಗ್ ಹಾಲ್ ಎರಡು ಪ್ರತ್ಯೇಕ ಕೊಠಡಿಗಳು. ಒಂದು ಉತ್ತಮ ಕಾರ್ಯಕ್ರಮ ನಡೆಸಿಕೊಡಲು ಹೇಳಿ ಮಾಡಿಸಿದಂತಿದೆ ಈ ಸಭಾಂಗಣ. ಈ ಸಲದ ಕಾರ್ಯಕ್ರಮ ನಿಮಗೆಲ್ಲ ಒಂದು ಸುಂದರ ಅನುಭವ ನೀಡುವದರಲ್ಲಿ ಸಂದೇಹವಿಲ್ಲ. ಈ ಕಾರ್ಯಕ್ರಮದ ಬಗ್ಗೆ ಒಂದೆರಡು ಮಾತು ಹೇಳಲೇ ಬೇಕು. ವರ್ಷದ ಕೊನೆಯ ಕಾರ್ಯಕ್ರಮವಾದ್ದರಿಂದ ಸಂಪ್ರದಾಯದಂತೆ ಸರ್ವ ಸದಸ್ಯರ ವಾರ್ಷಿಕ ಸಭೆ ಏರ್ಪಡಿಸಲಾಗಿದೆ. ಬೆಳಿಗ್ಗೆ ೧೦:೩೦ ಕ್ಕೆ ಪ್ರಾರಂಭವಾಗುವ ಈ ಸಭೆಯಲ್ಲಿ ಅಭಿಮಾನಿ ತಂಡ ತನ್ನ ವಾರ್ಷಿಕ ವರದಿ ಒಪ್ಪಿಸಲಿದೆ. ನಿಮ್ಮ ಸಲಹೆ ಮತ್ತು ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಇದೊಂದು ಉತ್ತಮ ಅವಕಾಶ, ತಪ್ಪದೆ ಭಾಗವಹಿಸಿ. ಮಕ್ಕಳ ವಿಶೇಷ ಕಾರ್ಯಕ್ರಮವಾದ್ದರಿಂದ ಮಕ್ಕಳಿಗಾಗಿ ಅನೇಕ ಸ್ಪರ್ಧೆಗಳನ್ನು ಏರ್ಪಡಿಸಲಿದ್ದೇವೆ. ಈ ಸ್ಪರ್ಧೆಗಳ ಮುಖ್ಯ ಉದ್ದೇಶ, ಹೆಚ್ಚು ಮಕ್ಕಳು ಭಾಗವಹಿಸಲಿ, ಅವರಿಗೆ ಇದೊಂದು ಕಲಿಕೆಯ ಅನುಭವವಾಗಲಿ ಎನ್ನುವುದು. ಇಂದೇ ನಿಮ್ಮ ಮಕ್ಕಳನ್ನು ನೋಂದಾಯಿಸಿ. ನವೆಂಬರ್ ೨೦, ಕೊನೆಯ ದಿನಾಂಕ.

"ಕನ್ನಡ ಕಸರತ್ತು" ನಮ್ಮ ಮಕ್ಕಳ ಕನ್ನಡ ಕಲಿಕೆಯ ಮಟ್ಟವನ್ನು ಗುರುತಿಸುವ ಸ್ಪರ್ಧೆ. ನಮ್ಮ ಕನ್ನಡ ಶಿಕ್ಷಕರೆಲ್ಲ ಸೇರಿ ಸಾಕಷ್ಟು ಸಿದ್ಧತೆ ಮಾಡಿಕೊಂಡಿದ್ದಾರೆ. ಶಬ್ದ, ವಾಕ್ಯ, ಕಥೆಗಳನ್ನು ಕೇಳುತ್ತ ಮಕ್ಕಳ ಕನ್ನಡ ಕಲಿಕೆ ಮತ್ತಷ್ಟು ಹೆಚ್ಚಾಗಲಿ ಎನ್ನುವುದೇ ನಮ್ಮ ಉದ್ದೇಶ. ಹಾಡಿನ ಸ್ಪರ್ಧೆ ಬೃಂದಾವನ ಕೋಗಿಲೆಯಲ್ಲಿ, ಕನ್ನಡ ಹಾಡುಗಳಿಗೆ ಪ್ರಾಧಾನ್ಯ. ಭಾವಗೀತೆ, ಜಾನಪದ ಗೀತೆ, ಚಿತ್ರಗೀತೆ ಹಾಡಲು ಮಕ್ಕಳಿಗೆ ವಿಶೇಷ ಅವಕಾಶ. ಚಿತ್ರ ಬರೆಯುವ ಸ್ಪರ್ಧೆಯಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಚಿತ್ರ ಬರೆಯಲು ಕೋರುತ್ತೇವೆ. ಎಲ್ಲ ಸ್ಪರ್ಧೆಗಳಲ್ಲಿ ನಾಲ್ಕು ಹಂತಗಳಿವೆ. ಹೀಗಾಗಿ ಹೆಚ್ಚು ಮಕ್ಕಳು ಭಾಗವಹಿಸಲು, ಬಹುಮಾನ ಗೆಲ್ಲಲು ಹೆಚ್ಚು ಅವಕಾಶ. ಈ ಎಲ್ಲ ಸ್ಪರ್ಧೆಗಳಿಗೂ ನ್ಯೂಜೆರ್ಸಿ ಕನ್ನಡ ಸ್ನೇಹಿತರು, ಸಾಹಿತಿಗಳು, ಸಂಗೀತಗಾರರು ತೀರ್ಪುಗಾರರಾಗಲಿದ್ದಾರೆ. ಅವರ ಸಲಹೆ, ಅನುಭವದ ಮಾತುಗಳು, ಮಕ್ಕಳು ಮತ್ತಷ್ಟು ಕಲಿಯಲು ಸಹಾಯವಾದೀತು, ಸ್ಫೂರ್ತಿ ನೀಡೀತು.

ಅಭಿಮಾನಿ ತಂಡ ಈ ಸಲದ ಉತ್ಸವದಲ್ಲಿ ಎರಡು ವಿಶೇಷ ಕಾರ್ಯಕ್ರಮಗಳನ್ನು ಪ್ರಪ್ರಥಮವಾಗಿ ಪ್ರಸ್ತುತ ಪಡಿಸುತ್ತಿದೆ. ಒಂದು "ನಾದ ಬೃಂದಾವನ" ಮತ್ತೊಂದು " ನೃತ್ಯ ಬೃಂದಾವನ". ಕರ್ನಾಟಕದಿಂದ ಸಾವಿರಾರು ಮೈಲು ದೂರ ಬಂದಿದ್ದರೂ, ನಮ್ಮ ಮಕ್ಕಳು ಸಂಸ್ಕೃತಿಗೆ ಹತ್ತಿರವಾದ ಸಂಗೀತ, ನೃತ್ಯ ಕಲಿಯಲಿ ಎನ್ನುವ ಆಸೆ ಎಲ್ಲ ಪೋಷಕರದು. ಈ ದಿಸೆಯಲ್ಲಿ ಸಾಕಷ್ಟು ಶ್ರಮ ವಹಿಸಿ ನಮಗೆಲ್ಲ ಸಹಾಯ ಮಾಡುತ್ತಿರುವವರು - ನ್ಯೂಜೆರ್ಸಿಯಲ್ಲಿರುವ ಕನ್ನಡ ನೃತ್ಯ ಮತ್ತು ಸಂಗೀತ ನೃತ್ಯ ಶಿಕ್ಷಕರು. ನಮ್ಮ ನಾದ ಮತ್ತು ನೃತ್ಯ ಕಾರ್ಯಕ್ರಮಗಳಲ್ಲಿ ನ್ಯೂಜೆರ್ಸಿ ಕನ್ನಡ ಸಂಗೀತ ಶಿಕ್ಷಕರ ಶಾಲೆಯ ಮಕ್ಕಳಿಂದ ವಿಶೇಷ ಪ್ರದರ್ಶನವಿದೆ. ಈ ಮಕ್ಕಳ ನೃತ್ಯ ಮತ್ತು ಸಂಗೀತ ಪ್ರದರ್ಶನದಿಂದ ಇನ್ನೂ ಹೆಚ್ಚಿನ ಮಕ್ಕಳು ಶಾಸ್ತ್ರೀಯ ಕಲೆಗಳಲ್ಲಿ ಒಲವು ತೋರಿಸಿಯಾರು. ಪೋಷಕರಿಗೆಲ್ಲ ಶಿಕ್ಷಕರ ಪರಿಚಯವಾಗುವದರಿಂದ ಅವರಿಗೂ ಸುಲಭವಾದೀತು. ನ್ಯೂಜೆರ್ಸಿಯಲ್ಲಿ ಶಾಸ್ತ್ರೀಯ ಕನ್ನಡ ಸಂಸ್ಕೃತಿ ಉಳಿಸಲು ಬೆಳೆಸಲು ಅಭಿಮಾನಿ ತಂಡದಿಂದ ಇದೊಂದು ಅಳಿಲು ಸೇವೆ.

ಬೃಂದಾವನ ಕನ್ನಡ ಶಾಲೆ ತನ್ನ ಮೂರನೆಯ ವರ್ಷವನ್ನು ಹೊಸ ಉತ್ಸಾಹದಿಂದ ನಡೆಸುತ್ತಿದೆ. ನೂರಕ್ಕೂ ಹೆಚ್ಚು ಮಕ್ಕಳು, ಮೂವತ್ತಕ್ಕೂ ಹೆಚ್ಚು ಸ್ವಯಂ ಶಿಕ್ಷಕರಿಂದ ಕನ್ನಡ ಪಾಠ ಕಲಿಯುತ್ತಿದ್ದಾರೆ. ಮೊನ್ನೆ ಮಕ್ಕಳ ದಿನಾಚರಣೆ ಸಂದರ್ಭದಲ್ಲಿ ಬೃಂದಾವನ ಶಾಲೆಯ ಮಕ್ಕಳೆಲ್ಲ "ಲ ಕೆ" ರೇಡಿಯೋ ಕೇಂದ್ರದಲ್ಲಿ ಕುಳಿತು ಕನ್ನಡ ಮಾತನಾಡುವುದನ್ನು ನೋಡಿದಾಗ ನಾವು ಪಡುತ್ತಿರುವ ಶ್ರಮ ಸಾರ್ಥಕವೆನಿಸಿತು. ಇದಕ್ಕಿಂತ ಇನ್ನೇನು ಬೇಕು? ಈ ಸಲದ ಮತ್ತೊಂದು ವಿಶೇಷ ಕಾರ್ಯಕ್ರಮ ಬೃಂದಾವನ ಕನ್ನಡ ಶಾಲೆಯ ಮಕ್ಕಳೆಲ್ಲ ಸೇರಿ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸಲಿದ್ದಾರೆ. ಕನ್ನಡ ಮಕ್ಕಳ ಪ್ರದರ್ಶನ ನೋಡುವುದು, ಕೇಳುವುದಕ್ಕಿಂತ ಸಂತೋಷ ಏನಿದೆ?.

ಈ ಕಾರ್ಯಕ್ರಮವನ್ನು ಖಂಡಿತ ತಪ್ಪಿಸಿಕೊಳ್ಳಬೇಡಿ.

ಈ ಎಲ್ಲ ಕಾರ್ಯಕ್ರಮಗಳ ಜೊತೆ ನ್ಯೂಜೆರ್ಸಿಯಲ್ಲಿರುವ ಹಲವಾರು ಕನ್ನಡ ಸ್ನೇಹಿತರಿಂದ ಹಾಸ್ಯ, ಹಾಡು, ನಾಟಕಗಳಿವೆ. ಒಟ್ಟಾರೆ ಖಂಡಿತವಾಗಿ ಇದೊಂದು ಸ್ನೇಹ, ಸಂಭ್ರಮ, ಸಮ್ಮಿಲನಗಳ ದಿನ.

ಬನ್ನಿ ಸಂತೋಷದಿಂದ ವಾರ್ಷಿಕ ಹಬ್ಬ ಆಚರಿಸೋಣ.

ನಿಮ್ಮ ಅಭಿಮಾನಿ,
*ಡಾ. ಅಶೋಕ್ ಕಟ್ಟಿಮನಿ*
ಅಭಿಮಾನಿ ತಂಡದ ಪರವಾಗಿ
ಅಧ್ಯಕ್ಷರು, ಬೃಂದಾವನ ಕನ್ನಡ ಕೂಟ





Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಹಿನ್ನೋಟ

## ಗಣೇಶೋತ್ಸವ



ಅನಿಲ್ ಭಾರದ್ವಾಜ

**ಬೃಂ**ದಾವನ ಅಭಿಮಾನಿ ತಂಡ ಸೆಪ್ಟೆಂಬರ್ ೨೩, ಶನಿವಾರದಂದು ಏರ್ಪಡಿಸಿದ್ದ, ಗಣೇಶ ಹಬ್ಬದ ಸಮಾರಂಭ ಬಹಳ ಯಶಸ್ವಿಯಾಗಿ ಜರುಗಿತು. ಉನ್ನತ ಮಟ್ಟದ ಕಾರ್ಯಕ್ರಮಗಳ ಭಾರಿ ಸಾಲುಗೂಡಿಕೆಯು ಆಗಿತ್ತು. ಮಕ್ಕಳಿಂದ ವಿಶೇಷ ಕನ್ನಡ ಪೂಜೆ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ವಿಶೇಷವೆಂದರೆ, ಮಕ್ಕಳು ಗಣೇಶನಿಗೆ ಪೂಜೆ ಸಲ್ಲಿಸುವದಲ್ಲದೆ, ಗಣೇಶನ ಪ್ರತಿಮೆಯನ್ನು ಸ್ವತಃ ತಾವೇ ರಚಿಸಿಕೊಂಡರು. ಮಕ್ಕಳಿಗೆ ಧರ್ಮ ಮತ್ತು ಕಲೆಯನ್ನು ಒಂದೇ ಚಟುವಟಿಕೆಯಲ್ಲಿ ಅನುಭವಿಸುವ ಅವಕಾಶ ಸಿಕ್ಕಿತು.

ಸಹಕಾಲಿಕವಾಗಿ, ರಂಗವರ್ತುಲ ತಂಡದವರಿಂದ ಪ್ರಶಸ್ತಿ-ವಿಜೇತ ನಾಟಕ 'ವೇಷ' ಮುಖ್ಯ ವೇದಿಕೆಯ ಮೇಲೆ ನಡೆಯಿತು. ರಂಗವೇಷ ಹಾಕುವ ಒಬ್ಬ ಕಲೆಗಾರನನ್ನು ಹೊರಪ್ರಪಂಚ ಹೇಗೆ ಆ ಪಾತ್ರದಂತೆಯೇ ಗುರುತಿಸುತ್ತದೆ, ಅದರಿಂದ ಆ ಕಲೆಗಾರನ ಮಾನಸಿಕ ಸ್ಥಿತಿಗೆ ಆಗುವ ಪರಿಣಾಮ, ಕೊನೆಗೆ ಅವನು ಹೇಗೆ ಆ ವೇಷ ಕಳಚಿಹಾಕಿ, ವಿಮುಕ್ತನಾಗಿ, ತನ್ನ ಸಹಜ ವ್ಯಕ್ತಿತ್ವವನ್ನು ವಾಪಸ್ಸು ಪಡೆದುಕೊಳ್ಳುವ ಎಂಬ, ಒಂದು ಸೂಕ್ಷ್ಮವಾದ, ಪಕ್ವವಾದ ವಿಷಯವನ್ನು, ಮಿರುಗುವ ಅಭಿನಯದಿಂದ ಪ್ರದರ್ಶಿಸಿ. ಪ್ರೇಕ್ಷಕರನ್ನು ಸೆರೆಹಿಡಿದರು.

ತದನಂತರ, ತಬಲಾ ನಾಣಿಯವರ ಹಾಸ್ಯರಂಜನಿ ತಂಡದಿಂದ ವಿಭಿನ್ನವಾದ ಹಾಸ್ಯದ ಕಿರುನಾಟಕಗಳು ಪ್ರಸ್ತುತವಾಯಿತು. ಅದು ಮುಂದಿನ ಸುಧಾ ಬರಗೂರ್ ಅವರ ಭರ್ಜರಿಯಾದ ನಿಂತು ಹೇಳುವ ಹಾಸ್ಯದ ಚುಟುಕಗಳ ಸುರಿಮಳೆಗೆ ಭೂಮಿಕೆಯಂತಿತ್ತು. ಅದಕ್ಕೆ ಮುನ್ನ ಶ್ರೀಮತಿ ಸುಧಾ ಬರಗೂರ್ ಅವರು, ಸಾಹಿತ್ಯ ಬೃಂದಾವನ ತಂಡ ಹೊರತಂದ 'ಬದುಕು ಜಟಕಾ ಬಂಡಿ' ಎಂಬ ಕಿರುಕಥೆಗಳ ಸಂಗ್ರಹವನ್ನು ಬಿಡುಗಡೆ ಮಾಡಿದರು. 'ಬದುಕು ಜಟಕಾ ಬಂಡಿ' ಪುಸ್ತಕದ ವೈಶಿಷ್ಟ್ಯವೇನೆಂದರೆ, ಅದು ಹವ್ಯಾಸಿ ಬರಹಗಾರರಾದ ಅಮೆರಿಕನ್ನಡಿಗರು ಬರೆದಿರುವ ಕಥೆಗಳ ಗುಚ್ಛ. ಶ್ರೀಮತಿ ಸುಧಾ ಬರಗೂರ್ ಅವರು ಅಮೆರಿಕನ್ನಡಿಗರಿಗಿರುವ ಈ ಕನ್ನಡ ಸಾಹಿತ್ಯದ ಮೇಲಿನ ಒಲವನ್ನು ತುಂಬುಹೃದಯದಿಂದ ಶ್ಲಾಘಿಸಿದರು.

ಹಾಸ್ಯದ ರಸದೌತಣದ ನಂತರ, ನೆರೆದ ಕನ್ನಡಾಭಿಮಾನಿಗಳಿಗೆ ಸ್ವಾದಿಷ್ಟವಾದ ಹಬ್ಬದೂಟ ಭೋಜನಶಾಲೆಯಲ್ಲಿ ಕಾದಿತ್ತು. ಬೃಂದಾವನ ತಂಡದ ಸ್ವಯಂಸೇವಕರು, ಊಟದ ವ್ಯವಸ್ಥೆಯನ್ನು ಬಹಳ ಎಚ್ಚರಿಕೆಯಿಂದ, ಅಚ್ಚುಕಟ್ಟಾಗಿ ಮಾಡಿದ್ದು, ಮನಸ್ಸಿಗೆ ಊಟದಲ್ಲಿ ತಿಂದ ಮೋದಕದಷ್ಟೇ ಮುದನೀಡಿತ್ತು.

ಮನೋರಂಜನಾ ಕಾರ್ಯಕ್ರಮ ಅಲ್ಲಿಗೆ ನಿಲ್ಲಲಿಲ್ಲ. ಊಟದ ನಂತರ 'ತರಂಗ' ತಂಡದಿಂದ ಫ್ಯೂಷನ್ ವಾದ್ಯಗೋಷ್ಠಿ ಏರ್ಪಡಿಸಲಾಗಿತ್ತು.

ಬಹುಮುಖ ಪ್ರತಿಭೆಯುಳ್ಳ ತಂಡದ ಸದಸ್ಯರು, ವಿವಿಧ ಸಂಗೀತ ಶೈಲಿಗಳಲ್ಲಿ ಹಾಡುಗಳನ್ನು ಹಾಡಿ, ಸೂಕ್ತವಾದ ಭಾರತೀಯ ಹಾಗು ವಿದೇಶೀಯ ವಾದ್ಯಗಳನ್ನು ಮನಕ್ಕೊಪ್ಪುವಂತೆ ನುಡಿಸಿದರು. ಮುಕ್ತಾಯದಲ್ಲಿ ಅವರು ಹಾಡಿದ ಜಬರ್ದಸ್ತಿನ ಹಾಡುಗಳಿಗೆ ಸಭಿಕರು ಕುಣಿದು ಕುಪ್ಪಳಿಸಿದರು.

ಬೃಂದಾವನ ಸಂಘದ ಮುಂದಿನ ಮನೋರಂಜನಾ ಕಾರ್ಯಕ್ರಮ ಆಗಲೇ ಎದುರುನೋಡುತ್ತಾ, ನೆರೆದ ಅತಿಥಿಗಳು ಆಹ್ಲಾದಕರವಾಗಿದ್ದ ಸಂಜೆಗೆ ವಿದಾಯ ಹೇಳಿದರು.



















ಛಾಯಾಚಿತ್ರ : ಕುಮಾರ್ ಕವಿ ಮತ್ತು ರಾಘವೇಂದ್ರ ಕುಂದಲಗುರ್ಕಿ

ಕಾರ್ಯಕ್ರಮದ ಹೆಚ್ಚಿನ ಫೋಟೋಗಳಿಗೆ ಇಲ್ಲಿ ಕ್ಲಿಕ್ ಮಾಡಿ


Copyright © KCO – Brindavana

ಸಂಚಿಕೆ
೧೩
ನವೆಂಬರ್, ೨೦೧೭



## ಧರ್ಮವಾಣಿ



ಡಾ|| ಎಂ.ಜಿ.ಪ್ರಸಾದ್

**ಪೀಠಿಕೆ**

ಸಾಹಿತ್ಯಾಭಿಮಾನಿಗಳಾದ ಕನ್ನಡಿಗರಿಗೆಲ್ಲಾ ನಮ್ಮ ದ್ವೈಮಾಸಿಕ ಪತ್ರಿಕೆಯಾದ ಬೃಂದಾವನ ವಾಣಿ ಸಾಹಿತ್ಯದ ವೈವಿಧ್ಯತೆ ನೀಡುತ್ತಿದೆ. ಈ ಸಂಚಿಕೆಯಿಂದ ಆರಂಭವಾಗಿ ಪ್ರತಿ ಬೃಂದಾವನ ವಾಣಿಯಲ್ಲಿ ಧರ್ಮವಾಣಿ ಎಂಬ ಶೀರ್ಷಿಕೆಯಡಿ ಲೇಖನ ಓದುಗರ ರಸಾಸ್ವಾದನೆಗೆ ಪ್ರಕಟಣೆಯಾಗಲಿದೆ. ಧರ್ಮವಾಣಿ ಲೇಖನದ ಉದ್ದೇಶವೇನೆಂದರೆ ಸರ್ವತೋಮುಖವಾದ ಸನಾತನ ಧರ್ಮದ ತತ್ವಗಳು ಹಾಗೂ ಅವುಗಳು ನಮ್ಮ ಜೀವನದಲ್ಲಿ ಹೇಗೆ ಉಪಯೋಗವಾಗುತ್ತವೆ ಎನ್ನುವುದನ್ನು ತಿಳಿದುಕೊಳ್ಳುವುದು. ಹಾಗೆಯೇ ಸನಾತನ ಧರ್ಮದ ಬಗ್ಗೆ ನಮಗೆ ಬರಬಹುದಾದ ಪ್ರಶ್ನೆಗಳನ್ನು ಧರ್ಮವಾಣಿಯಲ್ಲಿ ವಿಚಾರ ಮಾಡುವುದು. ಧರ್ಮವಾಣಿಗೆ ಬೃಂದಾವನ ವಾಣಿಯ ಓದುಗರೆಲ್ಲರ ಸಹಕಾರ ಬೇಕು.

**ಧರ್ಮವಾಣಿ ಎಂದರೇನು?**

ಧರ್ಮವಾಣಿಯಲ್ಲಿ ಎರಡು ಪದಗಳಿವೆ. ಒಂದು ಧರ್ಮ ಮತ್ತು ಇನ್ನೊಂದು ವಾಣಿ. ನಾವು ಮೊದಲು "ಧರ್ಮ ಎಂದರೇನು?" ಎಂಬುದನ್ನು ವಿಚಾರ ಮಾಡಬೇಕು. ಧರ್ಮ ಎನ್ನುವ ಪದ ಸಂಸ್ಕೃತದ "ಧೃ" ಎಂಬ ಧಾತುವಿನಿಂದ ಬಂದಿದೆ. "ಧಾರಣಾತ್ ಧರ್ಮ ಇತಿ" ಎಂದು ಮಹಾಭಾರತದ ಕರ್ತೃಗಳಾದ ವೇದವ್ಯಾಸರು ಹೇಳುತ್ತಾರೆ. ಧರ್ಮ ಎಂದರೆ ಧರಿಸುವ ಶಕ್ತಿಯನ್ನು ಹೊಂದಿರುವುದು. ಹಾಗೆಯೇ "ಧರ್ಮೋ ರಕ್ಷತಿ ರಕ್ಷಿತಃ" ಎಂದೂ ಹೇಳಿದೆ. ಎಂದರೆ ಧರ್ಮವನ್ನು ರಕ್ಷಿಸುವವರನ್ನು ಧರ್ಮವು ರಕ್ಷಿಸುತ್ತದೆ. ಹೀಗೆ ಧರ್ಮ ಎಂದರೆ ಧರಿಸುವ ಮತ್ತು ರಕ್ಷಿಸುವ ಶಕ್ತಿ. ಇಂತಹ ಶಕ್ತಿಯನ್ನು ಎಲ್ಲರೂ ಪಡೆಯಬೇಕು.

"ಧರ್ಮದ ಶಕ್ತಿಯನ್ನು ಎಲ್ಲರೂ ಪಡೆಯಬೇಕು?" ಎಂದರೆ, ಅದರಿಂದ ನಮಗೆ ಏನು ಸಿಗುತ್ತದೆ? ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಉತ್ತರವಾಗಿ "ಯತೋ ಅಭ್ಯುದಯ ನಿಃಶ್ರೇಯಸ ಸಿದ್ಧಿಃ ಸ ಧರ್ಮಃ" ಎಂದರೆ, ಯಾವುದರಿಂದ ನಮಗೆ ಈ ಭೂಮಿಯ ಮೇಲಿನ ಜೀವನದಲ್ಲಿ ಅಭ್ಯುದಯ ಎಂದರೆ ಒಳ್ಳೆಯ ಸುಖ ಶಾಂತಿಗಳಿಂದ ತುಂಬಿದ ಜೀವನ ಮತ್ತು ನಂತರದಲ್ಲಿ ಅಂದರೆ ಮರಣಾನಂತರ ಜೀವಕ್ಕೆ ನಿಃಶ್ರೇಯಸ ಎಂದರೆ ಒಳ್ಳೆಯ ಗತಿ ನೀಡುವುದು. ಆದ್ದರಿಂದ ನಾವೆಲ್ಲರೂ ಧರ್ಮ ಎಂದರೇನು? ಮತ್ತು ಅದರ ಆಚರಣೆ ಹೇಗೆ ಮಾಡುವುದು? ಎಂದು ತಿಳಿದುಕೊಂಡು ಆಚರಿಸಿ ನಮ್ಮ ಜೀವನದಲ್ಲಿ ಸುಖ ಶಾಂತಿಗಳನ್ನು ಪಡೆಯುವುದೇ ಉದ್ದೇಶ.

ವಾಣಿ ಎಂದರೆ ಮಾತು. ಒಬ್ಬರ ಮನೋಧರ್ಮಕ್ಕೆ ತಕ್ಕಂತೆ ಅವರ ಮಾತು ಹೊರಬರುತ್ತದೆ. ಉದಾಹರಣೆಗೆ, ಕೋಪದಲ್ಲಿರುವವರ ಮಾತು ಕೋಪದ ಅನುಭವವನ್ನು ಹೊರತಂದರೆ, ಹಾಸ್ಯದ ಅನುಭವದಲ್ಲಿರುವವರ ಮಾತು ಹಾಸ್ಯದ ಲಹರಿಯ ಅನುಭವ ನೀಡುತ್ತದೆ. ಆದ್ದರಿಂದ ವಾಣಿ ಎಂದರೆ ಅನುಭವ ವಾಣಿ ಎಂದಾಗುತ್ತದೆ. ಇದಕ್ಕಾಗಿಯೇ ವಾಣಿ ಅಥವಾ ಮಾತಿಗೆ ಅಷ್ಟು ಬೆಲೆ. ಇನ್ನೊಂದು ರೀತಿಯಲ್ಲಿ ನೋಡಿದಾಗ ಮನುಷ್ಯ ಜೀವನದಲ್ಲಿ ಕಾಯಾ, ವಾಚಾ, ಮತ್ತು ಮನಸಾ ಎಂಬ ಮೂರು ವಿಷಯಗಳ ಒಂದಾಗುವಿಕೆಯು ಮಹತ್ವದ ಪಾತ್ರವನ್ನು ಹೊಂದಿದೆ. ಅದಕ್ಕಾಗಿಯೇ "ಮನಸ್ಯೇಕಂ ವಚಸ್ಯೇಕಂ, ಕರ್ಮಣ್ಯೇಕಂ ಮಹಾತ್ಮನಾಮ್" ಅಂದರೆ "ಮಹಾತ್ಮರಲ್ಲಿ ಅವರ ಮನಸ್ಸು, ಮಾತು ಮತ್ತು ಕಾರ್ಯ ಒಂದಾಗಿರುತ್ತದೆ". ಆದ್ದರಿಂದ ವಾಣಿ ಎಂಬ ಪದ ಬಹಳ ವಿಶಿಷ್ಟ ಪದ. ನಾವೆಲ್ಲರೂ ಎಂದರೆ ಪ್ರತಿಯೊಬ್ಬ ಮನುಷ್ಯನೂ ತನ್ನ ಮನಸ್ಸು, ಮಾತು ಹಾಗೂ ಕಾರ್ಯಗಳನ್ನು ಒಂದಾಗಿಸಲು ಸತತವಾಗಿ ಪ್ರಯತ್ನವನ್ನು ಮಾಡಬೇಕು.

'ಧರ್ಮ' ಹಾಗೂ 'ವಾಣಿ' ಎಂಬ ಎರಡು ವಿಶಿಷ್ಟ ಪದಗಳ ಜೋಡಣೆಯಿಂದ ಬಂದ ನೂತನ ಪದವೇ 'ಧರ್ಮವಾಣಿ'. ಈ ಧರ್ಮವಾಣಿಗೆ ಸ್ಫೂರ್ತಿ ಭಾರತೀಯ ಜೀವನದ ಮೂಲದಲ್ಲಿರುವ ಸನಾತನ ಧರ್ಮದ ಋಷಿಗಳ ಅನುಭವದ ವಾಣಿಯಾದ ವೇದೋಪನಿಷತ್ತುಗಳು ಹಾಗೂ ಅವುಗಳ ಆಧಾರಿತ ಅಪಾರ ಸಾಹಿತ್ಯ. ಆದ್ದರಿಂದ ಈಗ 'ಧರ್ಮವಾಣಿ'ಯ ಮೂಲವಾದ ಸನಾತನ ಧರ್ಮದ ಬಗ್ಗೆ ವಿಚಾರ ಮಾಡೋಣ.

**ಸನಾತನ ಧರ್ಮ**

ಧರ್ಮ ಎನ್ನುವುದು ಮೊದಲೇ ಹೇಳಿರುವಂತೆ ವಿಶ್ವದ ಎಲ್ಲ ವಸ್ತುಗಳಿಗೆ ಆಧಾರವಾಗಿರುವ ಹಾಗೂ ರಕ್ಷಣೆ ನೀಡುವ ಶಕ್ತಿ. ಮತ್ತೊಂದು ರೀತಿಯಲ್ಲಿ ಧರ್ಮದ ವಿವೇಚನೆ ಮಾಡಬಹುದು. ಉದಾಹರಣೆಗೆ, 'ನೀರಿನ ಧರ್ಮ ಏನು?' ಎಂದರೆ, ನೀರಿಗೆ ಹರಿಯುವುದು ಸ್ವಾಭಾವಿಕ ಧರ್ಮ. ಹಾಗೆಯೇ ಬೆಂಕಿಗೆ ಸುಡುವುದೇ ಧರ್ಮ. ಹಕ್ಕಿಗೆ ಹಾರುವುದೇ ಧರ್ಮ. ಈ ರೀತಿ ನಿಸರ್ಗದ ಪ್ರತಿಯೊಂದು ಜಡ ವಸ್ತುವಿಗೂ ಹಾಗೂ ಪ್ರಾಣಿಗೂ ಅದರದೇ ಸ್ವಾಭಾವಿಕ ಧರ್ಮವಿರುತ್ತದೆ. ಈಗ ಏಳುವ ಮುಖ್ಯವಾದ ಪ್ರಶ್ನೆ, ಮನುಷ್ಯನ ಧರ್ಮ ಏನು? ಈ ಪ್ರಶ್ನೆಗೆ ಅನೇಕ ಉತ್ತರಗಳು ಸಿಗುತ್ತವೆ. ಉತ್ತರ ಯಾರು ನೀಡುತ್ತಾರೆ ಎಂಬುದರ ಮೇಲೆ 'ಧರ್ಮ'ದ ವ್ಯಾಖ್ಯೆ ಅವಲಂಬಿತವಾಗುತ್ತದೆ. ಆದರೂ ಮನುಷ್ಯ ವರ್ಗಕ್ಕೆ ಅನ್ವಯಿಸುವಂತಹ ಸಾರ್ವತ್ರಿಕವಾದ ಉತ್ತರವೆಂದರೆ, ಮನುಷ್ಯನಿಗೆ ಸದಾ ಮೂಡುವ ಒಂದಿಲ್ಲೊಂದು ರೀತಿಯ ಕುತೂಹಲ. ಮನುಷ್ಯನಿಗೆ ಸದಾ ಒಂದಿಲ್ಲೊಂದು ಪ್ರಶ್ನೆ ಏಳುತ್ತಿರುತ್ತದೆ. ಅದಕ್ಕಾಗಿಯೇ ಅವನಿಗೆ ಅರಿಯುವ ಸಾಮರ್ಥ್ಯವಿದೆ. ಅದೇ ರೀತಿ ಮನುಷ್ಯನಿಗೆ ತಾನು ಮಾಡುವ ಕೆಲಸದ ಹಿಂದೆ ಒಂದು ಉದ್ದೇಶವಿರುತ್ತದೆ. ಈ ಉದ್ದೇಶಗಳಲ್ಲಿ ವ್ಯತ್ಯಾಸ ಇರುವುದರಿಂದ ಸಮಾಜದಲ್ಲಿ ವೈವಿಧ್ಯತೆ ಕಾಣುತ್ತದೆ.

ಒಂದು ಕೆಲಸದ ಹಿಂದೆ ಇರುವ ಉದ್ದೇಶ ಎಷ್ಟು ಮುಖ್ಯ ಎನ್ನುವುದಕ್ಕೆ ಒಂದು ಉದಾಹರಣೆ ನೋಡೋಣ. ಒಬ್ಬನು ಒಂದು ಚಾಕುವನ್ನು ಹರಿತ ಮಾಡುವುದನ್ನು ನೋಡಿದಾಗ, ಅದು ಸರಿಯೇ ಅಥವಾ ತಪ್ಪೇ ಎನ್ನುವುದನ್ನು ನಿರ್ಧಾರ ಮಾಡಲಾಗುವುದಿಲ್ಲ. ಇಲ್ಲಿ ಅದರ ಹಿಂದಿನ ಉದ್ದೇಶ ತಿಳಿಯಬೇಕು. ಒಬ್ಬ ವೈದ್ಯನು ಶಸ್ತ್ರ ಚಿಕಿತ್ಸೆ ಮಾಡುವುದಾದರೆ ಅದು ಸರಿ. ಆದರೆ ಕ್ರೂರಿಯೊಬ್ಬನು ಮತ್ತೊಬ್ಬರ ಹಿಂಸೆಗೆ ಉಪಯೋಗಿಸುವುದಾದರೆ ತಪ್ಪು. ಆದ್ದರಿಂದ ಮನುಷ್ಯನ ಧರ್ಮ ಏನು? ಎಂಬ ಪ್ರಶ್ನೆಗೆ, ಅವನ ಯೋಚನೆ, ಮಾತು, ಕ್ರಿಯೆ ಹಾಗೂ ಪ್ರತಿಕ್ರಿಯೆಗಳನ್ನು ವಿಚಾರಿಸಿ ಉತ್ತರಿಸಬೇಕು. 'ಸನಾತನ' ಎಂಬ ಪದದ ಅರ್ಥ ಎಲ್ಲರಿಗೂ ತಿಳಿದಿದೆ. ಆದ್ದರಿಂದ 'ಸನಾತನ ಧರ್ಮ' ಎಂದರೆ "ಸಾರ್ವಕಾಲಿಕವಾಗಿ ಅನ್ವಯವಾಗುವ ತತ್ವಗಳ ಸಮೂಹ" ಎಂದಾಗುತ್ತದೆ.

**ಸನಾತನ ಧರ್ಮ ಸಾಹಿತ್ಯ**

ಸನಾತನ ಧರ್ಮದ ಅಪಾರವಾದ ಸಾಹಿತ್ಯವನ್ನು ನಮಗೆ ನೀಡಿದವರು ನಮ್ಮ ಪ್ರಾಚೀನ ಋಷಿಗಳು. ಈ ಋಷಿಗಳು ಅನುಭವದಲ್ಲಿ ಕಂಡುಕೊಂಡ ಸತ್ಯವೇನೆಂದರೆ- ವಿಶ್ವದ ಎಲ್ಲಾ ಜಡ ಹಾಗೂ ಚೈತನ್ಯ ತುಂಬಿದ ವಸ್ತುಗಳಿಗೂ ಹಾಗೂ ಕ್ರಿಯೆಗಳಿಗೂ ಸರ್ವಾಧಾರವಾದ ಚೇತನವಿದೆ. ಅದನ್ನೇ "ಬ್ರಹ್ಮನ್" ಎನ್ನುವುದು. ಋಷಿಗಳು ಬ್ರಹ್ಮ ವಸ್ತುವಿನ ಅನುಗ್ರಹದಿಂದ ತಪೋಸಾಧನೆ ಮಾಡಿ, ಸನಾತನ ತತ್ವಗಳನ್ನು ಶುದ್ಧವಾದ ದೇಹ ಹಾಗೂ ಮನಸ್ಸಿನಿಂದ ಅನುಭವಿಸಿ, ಮಂತ್ರಗಳ ಮಾಧ್ಯಮದಲ್ಲಿ ಅವನ್ನು ನಮಗೆ ನೀಡಿದರು. ಅದಕ್ಕಾಗಿಯೇ ಋಷಿಗಳನ್ನು ಮಂತ್ರದ್ರಷ್ಟಾರರೆಂದು ವರ್ಣಿಸಿದೆ. ಇಂತಹ ಅಪಾರವಾದ ಮಂತ್ರ ರಾಶಿಯನ್ನು 'ವೇದ' ಎನ್ನುತ್ತೇವೆ. ವೇದ ಎಂಬ ಪದವು 'ವಿದ್' ಎಂದರೆ 'ಅರಿಯುವುದು' ಎಂಬ ಧಾತುವಿನಿಂದ ಬಂದಿದೆ. ಆದ್ದರಿಂದಲೇ 'ವೇದ' ಎಂದರೆ 'ಜ್ಞಾನ' ಅಥವಾ 'ಅರಿವು'. ಈ ಜ್ಞಾನವನ್ನು ಋಷಿಗಳು ಅತೀಂದ್ರಿಯ ಮಟ್ಟದಲ್ಲಿ ನಿಂತು ಅನುಭವಿಸಿ, ಅರಿತು, ತಮ್ಮ ಶುದ್ಧ ಸಾಧನೆಯ ಮೂಲಕ ಇಂದ್ರಿಯ ಮಟ್ಟಕ್ಕೆ ತಂದು ನೀಡಿರುವುದನ್ನು ಗಮನಿಸಬೇಕು.


(ಮುಂದಿನ ಪುಟಕ್ಕೆ...)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಧರ್ಮವಾಣಿ

(...ಹಿಂದಿನ ಪುಟದಿಂದ)




ಸನಾತನ ಧರ್ಮದ ಸಾಹಿತ್ಯದ ಬೆಳವಣಿಗೆಯನ್ನು ಒಂದು ವೃಕ್ಷದಂತೆ, ಎಡಗಡೆ ಚಿತ್ರದಲ್ಲಿ ತೋರಿಸಿದೆ.

ಈ ರೀತಿಯ ವೃಕ್ಷದ ಬಗ್ಗೆ ಶ್ರೀ ಕೃಷ್ಣನು ಭಗವದ್ಗೀತೆಯ ಹದಿನೈದನೆಯ ಅಧ್ಯಾಯದ ಮೊದಲ ಶ್ಲೋಕದಲ್ಲಿ ಕೆಳಗಿನಂತೆ ಹೇಳಿದ್ದಾನೆ:

**ಊರ್ಧ್ವಮೂಲಮಧಃಶಾಖಮಶ್ವತ್ಥಂ ಪ್ರಾಹುರ ವ್ಯಯಂ**

**ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸ ವೇದವಿತ್**

ಅಂದರೆ, ಮೇಲುಗಡೆ ಬೇರುಗಳುಳ್ಳದ್ದೂ ಮತ್ತು ಕೆಳಗಡೆ ಕೊಂಬೆಗಳುಳ್ಳದ್ದೂ ಆದ ಈ ಅಶ್ವತ್ಥವು (ಸಂಸಾರವೆಂಬ ಈ ವೃಕ್ಷವು) ನಾಶರಹಿತವಾದುದೆಂದು ಹೇಳುತ್ತಾರೆ. ಈ ವೃಕ್ಷದ ಎಲೆಗಳೇ ಛಂದಸ್ಸುಗಳು (ವೇದಗಳು). ಈ ವೃಕ್ಷವನ್ನು ಅರಿತುಕೊಂಡವನೇ 'ವೇದವಿತ್' ಎಂದರೆ ವೇದಗಳನ್ನು ಬಲ್ಲವನಾಗುತ್ತಾನೆ. ಇಲ್ಲಿ 'ವೇದ' ಅಂದರೆ 'ಜ್ಞಾನ' ಮತ್ತು 'ವೇದವಿತ್' ಎಂದರೆ 'ಜ್ಞಾನಿ' ಎಂದೂ ಅರ್ಥ ಬರುತ್ತದೆ. ಈ ಸಂಸಾರ ವೃಕ್ಷದ ಮೂಲದಲ್ಲಿ 'ಬ್ರಹ್ಮವಸ್ತು'ವಿದ್ದು, ಅದರ ಬಗ್ಗೆ ತಿಳಿಯಲು ನಮಗೆ ವೇದಗಳೆಂಬ ಎಲೆಗಳಿವೆ. ಆದ್ದರಿಂದ ನಾವು ಈ ವೃಕ್ಷವನ್ನು ತಿಳಿಯಲು ಸನಾತನ ಧರ್ಮ ಸಾಹಿತ್ಯದ ಅಧ್ಯಯನ ಮಾಡಬೇಕು.

ಕರ್ನಾಟಕದ ಯೋಗಿ ಹಾಗೂ ಜ್ಞಾನಿಯೂ ಆದ ಶ್ರೀರಂಗ ಸದ್ಗುರುಗಳು ಈ ಬುಡಮೇಲು-ಕೆಳಕೊಂಬೆ ವೃಕ್ಷವನ್ನು ಮತ್ತೊಂದು ರೀತಿಯಲ್ಲಿ ವಿವರಿಸಿದ್ದಾರೆ. ಅದೇನೆಂದರೆ "ಈ ವೃಕ್ಷವು ನಮ್ಮ ಶರೀರವೇ ಆಗಿದೆ". ಇಲ್ಲಿ 'ಊರ್ಧ್ವಮೂಲಂ' ಎಂದರೆ ನಮ್ಮ ತಲೆಯೇ ಮೂಲವಾದುದು. ನಾವು ಹುಟ್ಟುವಾಗಲೂ ತಲೆಯೇ ಮೊದಲು. ನಂತರ ಅಧಃ ಶಾಖಂ ಎಂದರೆ ನಮ್ಮ ಅವಯವಗಳು. ನಮ್ಮ ಜೀವನಕ್ಕೆ ಬೇಕಾದ ಜ್ಞಾನ ಹಾಗೂ ಕರ್ಮಗಳಿಗೆ ಆಧಾರವಾದುದೇ ವೇದ ಸಾಹಿತ್ಯ. ಆದ್ದರಿಂದ ನಮ್ಮ ಜೀವನದ ಅಂತಿಮ ಗುರಿಯೇ 'ಬ್ರಹ್ಮಜ್ಞಾನ'. ಅದಕ್ಕೆ ಮಾರ್ಗವೇ 'ಯೋಗಮಾರ್ಗ'. ತೈತ್ತಿರೀಯ ಉಪನಿಷತ್ತಿನಲ್ಲಿ 'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ' ಎಂದಿದೆ. ಅಂದರೆ ಬ್ರಹ್ಮ ವಸ್ತುವು ಸತ್ಯ. ಎಂದರೆ ಅದು ಯಾವಾಗಲೂ ವಿಕಾರವಾಗದೆ ಇರುವ ವಸ್ತು. ಅದು 'ಜ್ಞಾನ ವಸ್ತು'. ಎಂದರೆ ಸದಾ ಚೈತನ್ಯ ತುಂಬಿದ 'ಅರಿಯುವ' ವಸ್ತು ಮತ್ತು ಅದು ಅನಂತ. ಎಂದರೆ ಎಲ್ಲೆಯಿಲ್ಲದೆ ಎಲ್ಲೆಡೆ ಇರುವ ವಸ್ತು. ಈ ಬ್ರಹ್ಮ ವಸ್ತುವೇ ಮೇಲಿನ ಚಿತ್ರದಲ್ಲಿನ ವೃಕ್ಷದ ಮೂಲದಲ್ಲಿದೆ. ಈ ಬ್ರಹ್ಮ ವಸ್ತುವನ್ನು ಅರಿಯಲು ಅಥವಾ ಸಾಕ್ಷಾತ್ಕರಿಸಿಕೊಳ್ಳಲು ಸಾಧನೆ ಮಾಡುವ ವ್ಯಕ್ತಿಯೇ "ಜೀವ". ಬ್ರಹ್ಮವಸ್ತುವಿನಿಂದ ಹೊರಬಂದು ಅದರ ಶರೀರದಂತಿರುವದೇ "ಜಗತ್ತು". ಆದ್ದರಿಂದಲೇ ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ತಿಳಿಯಬೇಕಾದುದು ಮೂರು ವಸ್ತುಗಳು ಹಾಗೂ ಆ ಮೂರರ ಸಂಬಂಧ. ಆ ಮೂರು ವಸ್ತುಗಳೇ "ಜೀವ, ಜಗತ್ತು ಮತ್ತು ಬ್ರಹ್ಮ". ವೇದಗಳು ಪ್ರಧಾನವಾಗಿ ಹೇಳಿರುವುದೇ ಈ ವಿಷಯ.

ಪ್ರತಿಯೊಬ್ಬರೂ ಅರಿಯಬೇಕಾದ ಈ ಮೂರು ವಿಷಯಗಳನ್ನು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳ ಮೂಲಕ ಸಾಧಿಸಬೇಕು. ಅದಕ್ಕಾಗಿಯೇ ಋಷಿಗಳು ನಮಗೆ ಈ ವೃಕ್ಷದಲ್ಲಿನ ಸನಾತನ ಧರ್ಮ ಸಾಹಿತ್ಯ ನೀಡಿದರು. ಈ ಅಪಾರ ವೇದಸಾಹಿತ್ಯವನ್ನು ವೇದವ್ಯಾಸರು ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣ ವೇದಗಳಾಗಿ ವಿಂಗಡಿಸಿದರು. ವೇದಗಳ ಸಾರವಾಗಿ ಕೊನೆಯ ಭಾಗದಲ್ಲಿ ಬರುವುದೇ ಉಪನಿಷತ್ತುಗಳು. ವೇದಗಳನ್ನು ಋಷಿಗಳು ಮೊಟ್ಟಮೊದಲಿಗೆ ಶ್ರವಣ ಮಾಡಿದುದದರಿಂದ ವೇದಕ್ಕೆ ಶೃತಿ ಎಂಬ ಹೆಸರು. ವೇದಗಳ ಆಧಾರದ ಮೇಲೆ ಎಲ್ಲರ ಧಾರ್ಮಿಕ ಜೀವನದ ಉಪಯೋಗಕ್ಕೆ ಋಷಿಗಳು ನೀಡಿರುವುದೇ ಸ್ಮೃತಿ ಗ್ರಂಥಗಳು. ಧಾರ್ಮಿಕ ಜೀವನದ ಅಡಿಪಾಯವಾದ ಇತಿಹಾಸ ಗ್ರಂಥಗಳೇ "ರಾಮಾಯಣ" ಮತ್ತು "ಮಹಾಭಾರತ". ಧಾರ್ಮಿಕ ಜೀವನದ ಕ್ರಮ ಹಾಗೂ ಆಧಾರವಾಗಿರುವ ದೇವಾಲಯಗಳ ಬಗ್ಗೆ ವಿವರ ನೀಡುವುದೇ ಆಗಮ ಗ್ರಂಥಗಳು ಮತ್ತು ತಂತ್ರಗಳು. ನಂತರ ಉಪವೇದಗಳೆಂದು ರಚಿತವಾಗಿರುವ ಆಯುರ್ವೇದ, ಧನುರ್ವೇದ, ಗಂಧರ್ವವೇದ ಹಾಗೂ ಅರ್ಥವೇದಗಳಿವೆ. ವೇದಗಳ ಅಧ್ಯಯನಕ್ಕೆ ಬೇಕಾದ ವೇದಾಂಗಗಳೇ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು ಹಾಗೂ ಜ್ಯೋತಿಷ್ಯ. ನಂತರ ಭಾರತೀಯ ದರ್ಶನದ ಅಡಿಪಾಯವಾದ ಉಪಾಂಗಗಳೇ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವ ಮೀಮಾಂಸಾ ಹಾಗೂ ಉತ್ತರ ಮೀಮಾಂಸಾ ಅಥವಾ ವೇದಾಂತ. ಸನಾತನ ಧರ್ಮದ ಮೂರು ಆಧಾರಗಳು-ಉಪನಿಷತ್ತುಗಳು, ಬ್ರಹ್ಮಸೂತ್ರಗಳು ಮತ್ತು ಭಗವದ್ಗೀತೆ. ಇವಲ್ಲದೇ ಇನ್ನೂ ಅನೇಕ ಸಂಸ್ಕೃತ ಕಾವ್ಯ ಗ್ರಂಥಗಳು ಧರ್ಮ ವಿಚಾರವನ್ನು ಒಳಗೊಂಡಿವೆ. ಅಲ್ಲದೆ ಇತರ ಭಾರತೀಯ ಭಾಷೆಗಳಲ್ಲಿಯೂ ಸನಾತನ ಧರ್ಮ ಸಾಹಿತ್ಯ ತುಂಬಿದೆ.

**ಸಾರಾಂಶ:**

ಒಟ್ಟಿನಲ್ಲಿ ನೋಡಿದಾಗ ನಮಗೆ ಅಪಾರವಾದ ಸನಾತನ ಧರ್ಮ ಸಾಹಿತ್ಯದ ನಿಧಿಯಿದೆ. ಅದರ ಜೊತೆಗೆ ಆಧುನಿಕ ಸಂಶೋಧನೆಗಳಿಂದ ತಿಳಿಯಲ್ಪಟ್ಟಿರುವ ವಿಜ್ಞಾನ ವಿಚಾರಗಳೂ ಇವೆ. ನಮಗೆ ಹಳೆಯದೂ ಬೇಕು, ಹೊಸದೂ ಬೇಕು ಮತ್ತು ನಮಗೆ ಜೀವನದಲ್ಲಿ ಶಾಂತಿ ಹಾಗೂ ಆನಂದ ಬೇಕು. ಡಾ|| ಡಿ. ವಿ. ಜಿ. ಯವರು ಇದನ್ನು ಕೆಳಗಿನ ಕಗ್ಗದಲ್ಲಿ ಸುಂದರವಾಗಿ ಹೇಳಿದ್ದಾರೆ:

***ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು***

***ಹೊಸ ಯುಕ್ತಿ ಹಳೆ ತತ್ವದೊಡಗೂಡೆ ಧರ್ಮ***

***ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ***

***ಜಸವು ಜನ ಜೀವನಕೆ-ಮಂಕು ತಿಮ್ಮ.***

**—0—**


Copyright © KCO – Brindavana

ಸಂಚಿಕೆ
೧೩
ನವೆಂಬರ್, ೨೦೧೭




## ದೀಪಾವಳಿ



ದಾಶರಥಿ ಘಟ್ಟು

ಹಳ್ಳಿಯಲ್ಲಿದ್ದ ಬಾಲ್ಯದ ದಿನಗಳಲ್ಲಿ ಎಲ್ಲ ಹಬ್ಬಗಳಿಗೂ ಕಾತರದಿಂದ ಕಾಯುತ್ತಿದ್ದೆವು. ಅವೆಲ್ಲಾ ೪೦-೪೫ ವರ್ಷದ ಹಿಂದಿನ ದಿನಗಳು. ಸುಮಾರು ೧೦೦ ಮನೆಗಳೂ, ಏಳೆಂಟು ಬೀದಿಗಳೂ, ೩೫೦-೪೦೦ ಜನಸಂಖ್ಯೆಯೂ ಇದ್ದ ಊರಲ್ಲಿ, ಏಕತಾನತೆಯಿಂದ ಜಡ್ಡುಗಟ್ಟಿಹೋಗಿರುತ್ತಿದ್ದ ನಮಗೆ ವೈವಿಧ್ಯತೆ ಎಂದರೆ ಇಂತಹ ಹಬ್ಬ ಹರಿದಿನಗಳು ಮತ್ತು ದೇವಸ್ಥಾನದಲ್ಲಿ ನಡೆಯುತ್ತಿದ್ದ ವಿಶೇಷ ಪೂಜೆಗಳು ಮಾತ್ರ. ಎಲ್ಲಾ ಹಬ್ಬಗಳೂ ವಿಶೇಷವೇ ಆಗಿದ್ದರೂ, ದೀಪಾವಳಿ ಊರವರೆಲ್ಲಾ ಆಚರಿಸುತ್ತಿದ್ದುದರಿಂದ ಮತ್ತು 'ಪಟಾಕಿ' ಎಂಬ ಘಟಕದ ಆಕರ್ಷಣೆಯಿಂದ ಹೆಚ್ಚು ವಿಶೇಷವಾಗಿತ್ತು.

ಹಬ್ಬವೆಂದರೆ ಮುಖ್ಯವಾಗಿ ಮೂರು ಸಂಗತಿಗಳು- ಹೊಸ ಬಟ್ಟೆಯ ನಿರೀಕ್ಷೆ, ಪ್ರತಿ ಹಬ್ಬಕ್ಕೂ ನಿರ್ದಿಷ್ಟ ಸಿಹಿಯ ಹಬ್ಬದೂಟ ಮತ್ತು ಸ್ಕೂಲಿಗೆ ರಜಾ. ಯುಗಾದಿಗೆ ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಹೋಳಿಗೆ; ಸಂಕ್ರಾಂತಿಗೆ ಎಳ್ಳು ಬೆಲ್ಲ ಮತ್ತು ಸಿಹಿ ಪೊಂಗಲ್; ಇನ್ನು ಗಣಪತಿ ಮೋದಕ ಹಸ್ತನೇ ಆಗಿರುವುದರಿಂದ ಬೇರೆ ಬೇರೆ ಹೂರಣದ ಕಡಬುಗಳು ಇತ್ಯಾದಿ. ಹೀಗೆ ದೀಪಾವಳಿಗೆ ಎಲ್ಲರ ಮನೆಯಲ್ಲೂ ತಪ್ಪದೆ ಕಜ್ಜಾಯ.



ಹಬ್ಬ ಎಂದರೆ ಮೊದಲು ನಮ್ಮ ಮನಸ್ಸುಗಳಲ್ಲಿ ಮಿಂಚಿ, ಕಣ್ಣುಗಳಲ್ಲಿ ಚಿಗುರುತ್ತಿದ್ದುದು 'ಹೊಸಬಟ್ಟೆ'ಯ ಕನಸು. ಈಗಿನಂತೆ ಮನಸ್ಸಿಗೆ ಬಂದಾಗ ಮಾಲ್ ಗಳಿಗೆ ಹೋಗಿ ಬಟ್ಟೆಬರೆ ತರುವ ಕಾಲವಲ್ಲ ಅದು. ಇಂತಹ ಒಂದು ದಿನ ಬರಬಹುದೆಂದು ಕನಸಿನಲ್ಲೂ ನಾವುಗಳು ಯೋಚಿಸಿರಲಿಲ್ಲ.

ಊರಿನಲ್ಲಿದ್ದ ಯಾರ ಆರ್ಥಿಕ ಪರಿಸ್ಥಿತಿಯೂ ನಾಲ್ಕಕ್ಕೇರದ, ಎರಡಕ್ಕಿಳಿಯದ ಸ್ಥಿತಿಯೇ ಆಗಿದ್ದುದರಿಂದ ತಮಗೆ ಬಟ್ಟೆ ತೆಗೆದುಕೊಳ್ಳುವುದೋ, ಅಥವಾ ಮಕ್ಕಳಿಗೆ ಬಟ್ಟೆ ಕೊಡಿಸುವುದೋ ವಾರ್ಷಿಕ ಪ್ಲಾನಿಂಗ್ ಆಗಿರುತ್ತಿತ್ತು. ಎಷ್ಟೋ ಮನೆಗಳಲ್ಲಿ ವರ್ಷಕ್ಕೊಂದು ಸಲ ಬಟ್ಟೆ ಹೊಲಿಸುವ ಸ್ಥಿತಿಯಿದ್ದರೆ, ಅರ್ಧಕ್ಕರ್ಧ ಜನ ಅದಕ್ಕೂ ಶಕ್ತರಾಗಿರಲಿಲ್ಲ. ಬಹಳ ಕುಟುಂಬಗಳಿಗೆ ದಿನದ ಎರಡು ಹೊತ್ತಿನ ಊಟಕ್ಕೆ ಹೊಂದಿಸುವುದೇ ಕಷ್ಟವಾಗಿದ್ದಾಗ ಬಟ್ಟೆಗೆ ಕಾಸೆಲ್ಲಿಂದ ತಂದಾರು?

ಊರಿಗೆಲ್ಲಾ ಇದ್ದಿದ್ದು ಟೈಲರ್ ವೆಂಕಟಪ್ಪನ ಅಂಗಡಿ. ಪಾಪ ಅವನಿಗೇನೂ ಕೈತುಂಬಾ ಕೆಲಸವಿರುತ್ತಿರಲಿಲ್ಲ. ಅಗಸರ ಜಾತಿಯವನಾದ ಅವನ ಮನೆಯಲ್ಲಿ ಕತ್ತೆಗಳನ್ನು ಸಾಕಿದ್ದು, ಸುಣ್ಣಕಲ್ಲು ಗೂಡುಗಳನ್ನು ಇಟ್ಟು, ಗೋಡೆಗೆ ಬಳಿಯುವ ಸುಣ್ಣ ತಯಾರಿಸುತ್ತಿದ್ದ ಕುಟುಂಬ ಅದು. ದುರ್ಬಲ ಕಾಯದ ವೆಂಕಟಪ್ಪ ಕಲ್ಲು ಸುಡುವ ಆವಿಗೆಗಳಲ್ಲಿ ಕೆಲಸ ಮಾಡಲು ಶಕ್ತನಾಗಿಲ್ಲದಿದ್ದುದರಿಂದ ಟೈಲರ್ ಅಂಗಡಿ ಇಟ್ಟಿದ್ದ ಎನ್ನಿಸುತ್ತದೆ.

ಊರ ಮುಂದಿನ ರಾಮಶೆಟ್ಟಿಯ ಕಟ್ಟಡದಲ್ಲಿ ಒಂದು ಸಣ್ಣ 'ಅಂಗಡಿ ರೂಮು' ವೆಂಕಟಪ್ಪನ ಟೈಲರ್ ಶಾಪ್. ಬಾಗಿಲಿಗೆದುರಾಗಿ ವೆಂಕಟಪ್ಪನ ಹೊಲಿಗೆ ಮಿಷಿನ್. ಬಟ್ಟೆ ನೇತು ಹಾಕಲು ಗೋಡೆಯ ಅಡ್ಡಗಲಕ್ಕೆ ಕಟ್ಟಿದ ಎರಡು ನೂಲು ಹಗ್ಗ. ನೆಲದ ಮೇಲೆ ಬಟ್ಟೆಗಳ ಗುಂಡಿ, ಕಾಜಗಳನ್ನು ಹಾಕುವ ಹುಡುಗನು ಕೂರಲು ಒಂದು ಚಾಪೆ. ಇಷ್ಟು ನಮ್ಮೂರ 'ವೆಂಕಟಪ್ಪ ಬೋಟಿಕ್' ನ ಚಿತ್ರ. ಊರಿನಲ್ಲಿ ಕೆಲಸವಿಲ್ಲದೇ ತಿರುಗುವ ಗಂಡಸರಲ್ಲಿ ಕೆಲವರು ಇಲ್ಲಿ ವಕ್ಕರಿಸಿಕೊಂಡು, ಬೀಡಿ ಸೇದುತ್ತಾ, ಅಪರೂಪಕ್ಕೆ ವೆಂಕಟಪ್ಪ ಮಾಡಿಸಿಕೊಡುತ್ತಿದ್ದ ಚಾ ಕುಡಿಯುತ್ತಾ, ಪುಂಖಾನು ಪುಂಖವಾಗಿ ಸುದ್ದಿಗಳನ್ನು ಸೃಷ್ಟಿಸಿಕೊಂಡು ಹೇಳುತ್ತಾ ಕಾಲ ಕಳೆಯುತ್ತಿದ್ದರು.ಉಳಿದ ದಿನಗಳಲ್ಲಿ ಬಟ್ಟೆಗಳನ್ನು ಆಲ್ಟರ್ ಮಾಡುವ ಇಲ್ಲವೇ ಹರಿದ ಬಟ್ಟೆಗಳ ತೇಪೆ ಹಾಕಿ ಕೊಡುವ ಕೆಲಸ ಮಾಡುತ್ತಿದ್ದ ವೆಂಕಟಪ್ಪನಿಗೆ, ಕೆಲಸ ಬರುತ್ತಿದ್ದುದೇ ಹಬ್ಬಗಳ ಸಮಯದಲ್ಲಿ.

ನಮ್ಮ ಮನೆಯಲ್ಲಿ ಪ್ರತಿ ಹಬ್ಬಕ್ಕೂ ಏನಾದರೊಂದು ಬಟ್ಟೆ ತರುತ್ತಿದ್ದರು. ಹೈಸ್ಕೂಲ್ ಮೇಷ್ಟ್ರಾಗಿದ್ದ ತಂದೆಯವರು, ಹಬ್ಬದ ಸಮಯದಲ್ಲಿ ಬೆಂಗಳೂರಿಗೆ ಹೋಗಿದ್ದರೆ ಅಲ್ಲಿಂದಲೋ, ಇಲ್ಲದಿದ್ದರೆ ತಾಲೂಕು ಪಟ್ಟಣವಾದ ಶ್ರೀನಿವಾಸಪುರದಿಂದಲೋ ಕೆಲವೊಮ್ಮೆ ನಮಗೆ ರೆಡಿಮೇಡ್ ಷರ್ಟು ಚಡ್ಡಿಗಳನ್ನು ತಂದು ಬಿಡುತ್ತಿದ್ದರು. ಇಲ್ಲದಿದ್ದರೆ ಜವಳಿ ಅಂಗಡಿಯಿಂದ ಬಟ್ಟೆ ತರುತ್ತಿದ್ದರು.

ಆ ಬಟ್ಟೆಯನ್ನು ಟೈಲರ್ ಅಂಗಡಿಗೆ ಕೊಟ್ಟು ಬರುವುದೇ ಒಂದು ದೊಡ್ಡ ಕೆಲಸ. ನಾವೇ ಅದನ್ನು ಅಂಗಡಿ ತಲುಪಿಸಿ, ಅಳತೆ ಕೊಟ್ಟು ಬರುವ ಹಾಗೇ ಇರಲಿಲ್ಲ.ಯಾರಾದರೂ ದೊಡ್ಡವರು ಜೊತೆಗೆ ಬಂದು, ಅಳತೆ ತಗೊಳ್ಳುವಾಗ ನಿಂತಿದ್ದು, "ತೋಳು ಇನ್ನೂ ಉದ್ದ ಇಡು, ಚಡ್ಡಿ ಸ್ವಲ್ಪ ಲೂಸಾಗಿ ಹೊಲಿ, ಷರ್ಟು ಮೈತುಂಬಾ ಇರಲಿ"-ಹೀಗೆ ಅಳತೆಯ specifications ಬದಲಾಯಿಸಿಬಿಡುತ್ತಿದ್ದರು.

ಬಟ್ಟೆ ಕೊಟ್ಟು ಬಂದ ಮೇಲೆ ಅವು ಗೋಡೆಗೆ ಕಟ್ಟಿದ ಹಗ್ಗವೆಂಬ 'ಬಿನ್' ಮೇಲೆ ಹೋಗಿ ವಿರಾಜಮಾನವಾಗಿಬಿಡುತ್ತಿತ್ತು. ನಮಗೋ, ನಾವು ಬಟ್ಟೆ ಕೊಟ್ಟ ತಕ್ಷಣ ಜಾದೂ ಮಾಡಿ ನಮ್ಮ ಷರ್ಟು, ಚಡ್ಡಿ ಕೊಡಬಾರದೇ ಎನ್ನುವಷ್ಟು ಭಾವೋದ್ವೇಗ. ಹೊಲಿಯಲು ಕೊಟ್ಟು ಬಂದ ಮೇಲೆ, ಪ್ರತಿದಿನ ಸಮಯ ಸಿಕ್ಕಾಗಲೆಲ್ಲಾ ಟೈಲರ್ ಅಂಗಡಿ ಹತ್ತಿರ ಹೋಗಿ ಬಟ್ಟೆ ಹಗ್ಗದಿಂದ ಕೆಳಗಿಳಿದಿದೆಯೇ? ಅದನ್ನು ಏನಾದರೂ ಕತ್ತರಿಸಿದ್ದಾರಾ? ವೆಂಕಟಪ್ಪ ಹೊಲಿಯಲು ತೆಗೆದುಕೊಂಡಿದ್ದಾನೆಯಾ? ಎಂಬುದನ್ನು ನೋಡುವುದೇ ಕೆಲಸ. ಕೊನೆಗೂ ಹೊಸ ಉಡುಪು ಸಿಕ್ಕುತ್ತಿದ್ದುದು ಹಬ್ಬದ ಹಿಂದಿನ ದಿನಕ್ಕೇ. ಅದೂ, ಅನೇಕ ಸಲ ಹೋಗಿ ಗೋಗರೆದು, ಕೆಲವೊಮ್ಮೆ ಮನೆಯವರು ಬಂದು ರೇಗಾಡಿ- ಅತ್ತೂ ಕರೆದೂ ಆಹ್ವಾನ ಗಿಟ್ಟಿಸಿದಂತೆ.

ಬಟ್ಟೆಬರೆಗಳ ಸಮಸ್ಯೆ ಮುಗಿದ ಮೇಲೆ ನಮಗೆಲ್ಲಾ ಪಟಾಕಿಯ ಚಿಂತೆ. ಆಗೆಲ್ಲಾ ಊರಿನಲ್ಲಿ ಅಷ್ಟೇನೂ ಪಟಾಕಿಯ ಹಾವಳಿಯಿರಲಿಲ್ಲ. ಊರಿನಲ್ಲಿ ಇದ್ದ ಮೂರು ಅಂಗಡಿಗಳಲ್ಲಿ ಮಾರಾಟಕ್ಕೆ ತರುತ್ತಿದ್ದ ಪಟಾಕಿ ಈಗಿನ ಐದಾರು ಮನೆಗಳಲ್ಲಿ ತರುವಷ್ಟಿರುತ್ತಿತ್ತಷ್ಟೇ. ಮಕ್ಕಳ ಹಠಕ್ಕೆ ಸೋತು "ಹಬ್ಬದ ದಿನವಾದರೂ ಮಕ್ಕಳನ್ನು ಶಿಕ್ಷಿಸಬಾರದೆಂದು" ರೈತರ ಅಪ್ಪ ಅಮ್ಮಂದಿರು, ಮನೆಯೆಲ್ಲಾ ತಡಕಿ ಸಿಕ್ಕ ಒಂದೋ, ಎರಡೋ ರೂಪಾಯಲ್ಲಿ ಒಂದಷ್ಟು ಕೇಪು, ಹುರುಳಿ ಪಟಾಕಿ, ಮತಾಪು ಕೊಡಿಸುತ್ತಿದ್ದರು. ಹಠ ಹಿಡಿದು ಅಳುವ ಮಕ್ಕಳಿಗೆ ಕೆಲವರು ತಾವೇ 'ತದುಕು' ಪಟಾಕಿ ಕೊಡುತ್ತಿದ್ದರು. ಹಬ್ಬದ ಅಡುಗೆ, ಬಟ್ಟೆ ಬರೆ, ಪೂಜೆ ಪುನಸ್ಕಾರಗಳಿಗೆ ಹವಣಿಸಲೇ ಹೈರಾಣಾಗಿ , ಸಾಲ ಸೋಲ ಮಾಡುತ್ತಿದ್ದ ಅವರುಗಳು ಪಟಾಕಿಗಳಿಗೆ ಎಲ್ಲಿಂದ ದುಡ್ಡು ಹೊಂದಿಸುವುದು?.

ನಮ್ಮ ಮನೆಯಲ್ಲಿ ಅಪ್ಪ ನರಕ ಚತುರ್ದಶಿಯ ಹಿಂದಿನ ದಿನದ ಹೊತ್ತಿಗೆ ಸ್ವಲ್ಪ ಪಟಾಕಿ ತರುತ್ತಿದ್ದರು. ೧೦ ಸಣ್ಣ ಸಣ್ಣ ಸರಗಳಿರುತ್ತಿದ್ದ ಹುರುಳಿ ಪಟಾಕಿ, ಒಂದಷ್ಟು ಕೇಪಿನ ಸುರುಳಿಗಳು, ಕೇಪು ಹೊಡೆಯಲು ಒಂದೊಂದು ಪಿಸ್ತೂಲ್, ಒಬ್ಬೊಬ್ಬರಿಗೆ ಒಂದೊಂದು ಬಾಕ್ಸ್ ಸುರುಸುರು ಬತ್ತಿ, ನಾಲ್ಕೈದು ಭೂ ಚಕ್ರ, ವಿಷ್ಣು ಚಕ್ರ ಮತ್ತು ಹೂ ಕುಂಡಗಳು. ಆದರೆ, ನರಕ ಚತುರ್ದಶಿಯ ದಿನ ಮುಂಜಾನೆಯೆದ್ದು ಎಣ್ಣೆ ನೀರು ಹಾಕಿಕೊಳ್ಳುವವರೆಗೂ ಪಟಾಕಿ ಮುಟ್ಟುವ ಹಾಗಿರಲಿಲ್ಲ.

ಇನ್ನು ಮೊದಲೇ ಹೇಳಿದಂತೆ ದೀಪಾವಳಿಯ ದಿನ ಕಜ್ಜಾಯ ಆಗಲೇಬೇಕು. ಅಷ್ಟರಲ್ಲಾಗಲೇ ಹೈಬ್ರಿಡ್ ತಳಿಯ ಅಕ್ಕಿ ಬಂದುಬಿಟ್ಟಿದ್ದು, ಸ್ಥಳೀಯ ತಳಿಯಾದ ಭೈರನೆಲ್ಲು ಹೆಸರಿಲ್ಲದಂತಾಗಿ ಹೋಗಿತ್ತು. ನಮ್ಮ ಅಜ್ಜಿಗೆ ಮಾತ್ರ ಭೈರನೆಲ್ಲಕ್ಕಿ ಕಜ್ಜಾಯ ಮಾಡಿದರೇನೇ ಸಂತೋಷ. ಇದ್ದ ಗದ್ದೆಗಳಲ್ಲಿ ಅಂಗಳದಷ್ಟಗಲ ಭೈರನೆಲ್ಲು ಹಾಕಿಸಿ, ಅದನ್ನು ದೀಪಾವಳಿಯ ಕಜ್ಜಾಯಕ್ಕಾಗಿ ಒಣಗಿಸಿ ಇಟ್ಟುಕೊಂಡಿರುತ್ತಿದ್ದರು. ದೀಪಾವಳಿಯ ಒಂದು ವಾರಕ್ಕೆ ಮುಂಚೆ ಅದನ್ನು ಅಕ್ಕಿ ಮಾಡಿಸುತ್ತಿದ್ದರು. ಒರಳಿನಲ್ಲಿ ಕುಟ್ಟಿ ಮಾಡುತ್ತಿದ್ದ ಅಕ್ಕಿಯನ್ನು ಆಮೇಲಿನ ವರ್ಷಗಳಲ್ಲಿ ಮಿಲ್ಲು ಮಾಡಿಸುತ್ತಿದ್ದರೂ, ದೇವರ ನೈವೇದ್ಯದ ಕಜ್ಜಾಯಕ್ಕಾಗಿ ಬತ್ತ ಕುಟ್ಟಿಯೇ ಅಕ್ಕಿ ಮಾಡುತ್ತಿದ್ದರು.

ಈ ಅಕ್ಕಿಯನ್ನು ತೊಳೆದು, ನೆನೆಸಿ, ಚೆನ್ನಾಗಿ ನೀರು ಬಸಿದು ಆರ ಹಾಕಬೇಕು. ಇದನ್ನು ಅಮ್ಮ ಮತ್ತು ಅಜ್ಜಿ ಸೇರಿ ಹಿಟ್ಟು ಮಾಡಿಕೊಳ್ಳುತ್ತಿದ್ದರು. ಮನೆಯಲ್ಲಿ ಇನ್ನೂರು ಕಜ್ಜಾಯಗಳನ್ನಾದರೂ ಕರಿಯಬೇಕಾಗಿದ್ದುದರಿಂದ ಸುಮಾರು ಹಿಟ್ಟೇ ಬೇಕಾಗುತ್ತಿತ್ತು.ದಿನಗಳೆದಂತೆ ನೆನೆಸಿ ಆರಿಸಿದ ಅಕ್ಕಿಯನ್ನು ಮಿಲ್ಲು ಮಾಡಿಸಿಕೊಂಡು ಬರುತ್ತಿದ್ದೆವು. ಹೀಗೆ ಒಂದು ದೀಪಾವಳಿಗೆ ಅಕ್ಕಿ ಮಿಲ್ಲು ಮಾಡಿಸಿಕೊಂಡು ಬರಲು ಗುಮ್ಮರೆಡ್ಡಿಪುರಕ್ಕೆ ಹೋಗಿದ್ದೆ. ಗಿರಣಿಯವನು ಮೆಣಸಿನಕಾಯಿ ಪುಡಿ ಮಾಡಿದ್ದು, ಅದರ ನಂತರವೇ ಈ ಅಕ್ಕಿ ಹಾಕಿ, ಅಕ್ಕಿ ಹಿಟ್ಟೆಲ್ಲಾ ಮೆಣಸಿನಪುಡಿ ಘಾಟು. ಅವೆಲ್ಲಾ ನನಗೇನು ಗೊತ್ತಾಗುತ್ತಿತ್ತು? ಮನೆಗೆ ಬಂದ ಮೇಲೆ ಅದನ್ನು ನೋಡಿ ಅಮ್ಮ ಕಂಗಾಲು. ಕಜ್ಜಾಯಕ್ಕೆ ಏನು ಮಾಡುವುದೆಂದು ತೋಚದೆ, ಆತುರಾತುರವಾಗಿ ಅಕ್ಕಿ ನೆನೆಸಿ, ಆರಿಸಿ, ಕುಟ್ಟಿಸಿ ಹಿಟ್ಟು ಮಾಡಿಸಿಕೊಂಡಿದ್ದಾಯಿತು. ( ಮುಂದಿನ ಪುಟಕ್ಕೆ....)


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



(...ಹಿಂದಿನ ಪುಟದಿಂದ)

ನರಕ ಚತುರ್ದಶಿಯ ಬೆಳಗಿನ ಜಾವ ೪೧/೨-೫ ಗಂಟೆಗೆ ಮಲಗಿದ್ದ ನಮ್ಮನ್ನು ಎಬ್ಬಿಸಿ, ತಲೆಗೆ ಹರಳೆಣ್ಣೆ ಧಾರಾಳವಾಗಿ ಮೆತ್ತಿ, ಆರತಿಯೆತ್ತಿ ನೀರೆರೆಯುತ್ತಿದ್ದರು. ಎಣ್ಣೆ ಬಿಡಬೇಕೆಂದು ಸೀಗೆ ಪುಡಿ ಹಾಕಿ ತಿಕ್ಕುವುದು. ಆ ಸೀಗೆಪುಡಿ ಕಣ್ಣಿಗೆ ಹೋಗಿ ಉರಿಯುವುದು. ಅದಕ್ಕೆ ಅಳು, ಕಿರಿಚಾಟ-ಈ ಪ್ರಸಹನಗಳೂ ದೀಪಾವಳಿಯ ಮಾಮೂಲು ಸಂಗತಿಗಳು. ಇವೆಲ್ಲಕ್ಕೂ ಕಷ್ಟಪಟ್ಟು ರೆಡಿಯಾಗುತ್ತಿದ್ದುದು, ಹೊಸಬಟ್ಟೆ ತೊಡಬಹುದು; ಪಟಾಕಿ ಹೊಡೆಯಬಹುದು ಎಂಬ ಆಸೆಯಿಂದ.

ಅಜ್ಜಿ ಹೇಳಿದಂತೆ ಷರಟು ಚಡ್ಡಿಗಳಿಗೆ ಕುಂಕುಮ ಹಚ್ಚಿ, ದೇವರ ಮುಂದೆ ಇ ಟ್ಟು, ಧರಿಸಿ ಕೊಂಡರೆ ಶರ್ಟಿನ ಒಂದು ತೋಳು ಉದ್ದ ಇದ್ದರೆ, ಇನ್ನೊಂದು ಗಿಡ್ಡ. ಕಾಜ ಎಲ್ಲೋ, ಬಟನ್ ಎಲ್ಲೋ; ಕೆಲವೊಮ್ಮೆ ಯಾರದೋ ಅಳತೆಗೆ ಹೊಲಿದ ಚಡ್ಡಿ. ಟೈಲರ್ ವೆಂಕಟಪ್ಪನನ್ನು ಬೈಕೊಂಡು, ಸೇಫ್ಟಿ ಪಿನ್ನು ಹಾಕಿಕೊಂಡೋ, ತೋಳು ಸ್ವಲ್ಪ ಮಡಿಸಿಕೊಂಡೋ ರೆಡಿಯಾಗಿ, ಪಟಾಕಿ ಕೈಗೆ ಸಿಕ್ಕರೆ ಸ್ವರ್ಗವೇ ಸಿಕ್ಕಷ್ಟು ಸಂತೋಷ.

ದೀಪಾವಳಿಯ ದಿನ ಊರಿನ ಯಾವ ಬೀದಿಯಲ್ಲಿ ಹೋದರೂ ಕಜ್ಜಾಯ ಕರೆಯುತ್ತಿರುವ ಘಮಲು. ಕೆಲವು ದೊಡ್ಡ ದೊಡ್ಡ ಗೌಡರ ಮನೆಗಳಲ್ಲಿ ತುಪ್ಪದಲ್ಲಿ ಕಜ್ಜಾಯ ಕರೆಯುತ್ತಿದ್ದರು. ನಮ್ಮೂರ ಶಾನುಭೋಗರಾದ ವಿಠಲರಾಯರ ಮನೆಯಲ್ಲೂ ಸಾಮಾನ್ಯವಾಗಿ ತುಪ್ಪದಲ್ಲಿ ಕರೆದ ಕಜ್ಜಾಯವೇ. ಆ ದಿನ ಚಿತ್ರಾನ್ನ, ಪಾಯಸ, ಕೋಸಂಬರಿ, ಅನ್ನ, ಸಾರು, ಹುಳಿ, ತೊವ್ವೆ ಏನೇ ಮಾಡಿದ್ದರೂ ಅವೆಲ್ಲ 'ಕಜ್ಜಾಯ' ವೆಂಬ ರಾಜನ ಮುಂದೆ ಸಪ್ಪೆ ಆಳುಗಳಷ್ಟೇ.

ಬ್ರಾಹ್ಮಣರ ಮನೆಗಳನ್ನು ಬಿಟ್ಟರೆ, ಅಲ್ಲಿ ನರಕಾಸುರ ಅಥವಾ ಮಹಾಬಲಿಯ ಕತೆಗೆ ಪ್ರಾಮುಖ್ಯತೆ ಇರಲಿಲ್ಲ. ನಮ್ಮ ಮನೆಯಲ್ಲೂ ದೀಪಾವಳಿಯ ದಿನ ಆಚರಿಸುತ್ತಿದ್ದುದು ಕೇದಾರೇಶ್ವರನ ವ್ರತ. ಬೆಂಗಳೂರಿನಲ್ಲಿರುತ್ತಿದ್ದ ದೊಡ್ಡಪ್ಪ ದೀಪಾವಳಿಗೆ ಬರುತ್ತಿದ್ದುದರಿಂದ, ವ್ರತದ ಹೂವು ಹಣ್ಣುಗಳಿಗೆ ಕೊರತೆಯಿರುತ್ತಿರಲಿಲ್ಲ. ಪಟಾಕಿಯ ಸಂಭ್ರಮದಲ್ಲಿರುತ್ತಿದ್ದ ನಾವು ಹೂ ಬಿಡಿಸಿ ತರುವ ಕೆಲಸದಿಂದ ರಜಾ ತೆಗೆದುಕೊಳ್ಳುತ್ತಿದ್ದೆವು



ಕೈಲಿದ್ದ ಪುಡಿ ಪಟಾಕಿಗಳನ್ನು ಹೊಡೆದು ಮುಗಿಸಿದ ಮೇಲೆ, ಯಾರ ಮನೆಯ ಮುಂದೆ ಪಟಾಕಿ ಹೊಡೆಯುತ್ತಿದ್ದರೂ ಹೋಗಿ ನೋಡುತ್ತಾ ನಿಂತಿರುವುದು, ಪಟಾಕಿ ಸದ್ದು ಬಂದ ದಿಕ್ಕಿಗೆಲ್ಲಾ ದೌಡಾಯಿಸುವುದು, ಕೊನೆಗೆ ಅಲೆದು ಸುಸ್ತಾಗಿ ಮನೆಗೆ ಬಂದು, ವ್ರತದ ಪೂಜೆ ಯಾವಾಗ ಮುಗಿದು ಊಟಗಳಿಗೆ ಎಲೆ ಹಾಕುತ್ತಾರೋ ಅಂತ ಕಾಯುತ್ತಾ ಕುಳಿತಿರುವುದು. ವ್ರತದ ಪೂಜೆ ಮುಗಿದು, ಕೈಗೆ ದಾರಗಳನ್ನು ಕಟ್ಟಿಕೊಂಡು ಕೇದಾರನಾಥನಿಗೆ ನಮಸ್ಕಾರ ಮಾಡಿ, ಪೂಜೆಯ ಪ್ರಸಾದ ತಿಂದು ಮತ್ತೆ ಊರಿನ ನಾಲ್ಕು ಬೀದಿಗಳಲ್ಲಿ ಸರ್ಕೀಟ್ ಹೊಡೆದು ಬರುವಷ್ಟರಲ್ಲಿ ದೇವರ ಪೂಜೆ ಮುಗಿದು ಊಟ. ಕಾತರಿಸಿ ಕಾಯುತ್ತಿದ್ದ ಕಜ್ಜಾಯಗಳು. ನಮ್ಮ ಅಮ್ಮನ ಅಮ್ಮ ತುಂಬಾ ಚೆನ್ನಾಗಿ ಕಜ್ಜಾಯ ಮಾಡುತ್ತಿದ್ದರು. ಆ ಕಜ್ಜಾಯಗಳ ರುಚಿ ಇನ್ನೂ ನನ್ನ ಸ್ಮೃತಿಯಿಂದ ಅಳಿಸಿಲ್ಲ. ಅವತ್ತು ಯಾರ ಮನೆಗೆ ಹೋದರೂ ಕಜ್ಜಾಯ ಕೊಡುತ್ತಿದ್ದರು. ಆದರೆ ಎಷ್ಟೂ ಅಂತ ತಿನ್ನುತ್ತೀರಿ?

ಸಂಜೆ ಹೊತ್ತಿಗೆ ಹೊಲದಿಂದ ಹಿಂದಿರುಗುವ ಕೃಷಿಕರು ಸ್ನಾನ ಮಾಡಿದ ಬಳಿಕ ಹಬ್ಬದ ಆಚರಣೆಯಲ್ಲಿ ತೊಡಗುತ್ತಿದ್ದರು. ತಮ್ಮ ತಮ್ಮ ಮನೆಗಳಲ್ಲಿ ಕಬ್ಬಿನ ಜಲ್ಲೆಯಿಂದ ಮಂಟಪ ಕಟ್ಟಿ, ಮಂಟಪಕ್ಕೆ ರಾಗಿ, ಭತ್ತ, ನವಣೆ ಮುಂತಾದ ತೆನೆ ಗೊಂಚಲು ಕಟ್ಟಿ, ತೂಗುಹಾಕಿ, ಸ್ಥಳೀಯವಾಗಿ ದೊರೆಯುವ ಹೂಗಳಿಂದ ಅಲಂಕರಿಸಿ ದೇವರ ಪಠ ಇಟ್ಟು ಪೂಜೆ ಮಾಡುತ್ತಿದ್ದರು,

ರಾತ್ರಿ ಸುರ್ ಸುರ್ ಬತ್ತಿ, ಮತಾಪು, ಹೂಕುಂಡಗಳನ್ನು ಬೆಳಗಿ ಸಂಭ್ರಮಿಸಿ, ಕೇದಾರೇಶ್ವರನ ಪೂಜೆಯ ನಂತರ ಹಿರಿಯರು ಯಾರಾದರೂ ಓದುವ ವ್ರತ ಮಹಾತ್ಮೆಯ ಕಥೆ ಕೇಳಿ, ಮಂಗಳಾರತಿ ಆದ ಮೇಲೆ ಪ್ರಸಾದ ತಿಂದು, ದೇವಸ್ಥಾನದಲ್ಲಿ ನಡೆಯುತ್ತಿದ್ದ ಪೂಜೆಗೆ ಓಡುತ್ತಿದ್ದೆವು. ದೀಪಾವಳಿಯ ರಾತ್ರಿ ಸಾಮಾನ್ಯವಾಗಿ ವೇಣುಗೋಪಾಲನ ಗುಡಿಯ ಸುತ್ತಲೂ ಹಣತೆಗಳನ್ನು ಹಚ್ಚಿ ಅಲಂಕರಿಯುತ್ತಿದ್ದರು. ಅಮಾವಾಸ್ಯೆಯ ನೀರವ ಕತ್ತಲಿನಲ್ಲಿ ದೇವಾಲಯದ ಸುತ್ತ ಬೆಳಗುತ್ತಿದ್ದ ದೀಪಗಳು ಅಮೂರ್ತ ಅನುಭವ ಕೊಡುತ್ತಿತ್ತು. ಗುಡಿಯಲ್ಲಿ ಮಂಗಳಾರತಿ ಮುಗಿಸಿಕೊಂಡು, ಮನೆಗೆ ಬಂದು ಊಟ ಮಾಡಿ ಮಲಗಿದರೆ ನೆಮ್ಮದಿಯ ನಿದ್ರೆ. ಮಾರನೇ ದಿನದ ಬಲಿ ಪಾಡ್ಯಮಿಯ ಕನಸು!

ಹಬ್ಬದ ವಾರದ ವೀಕೆಂಡ್ ನಲ್ಲಿ ಒಂದಷ್ಟು ಫ್ಯಾಮಿಲಿಗಳು ಸೇರಿ, ಸಾಮರಸ್ಯವಿಲ್ಲದ ಪಾಟ್ ಲಕ್ ಮೆನು ಐಟೆಮ್ಸ್ ಜೊತೆ ರೋಟಿಕಾ ಒಣ ಚಪಾತಿಗಳನ್ನು ತಿಂದು, ಮಿಠಾಸ್ ಸ್ವೀಟ್ ಬಾಕ್ಸ್ ನ ಪ್ರತಿ ಹಬ್ಬಕ್ಕೂ ತಿನ್ನುವ ಸಿಹಿಗಳನ್ನೇ ತಿಂದು, "ಹ್ಯಾಪಿ ದೀಪಾವಳಿ" ಆಚರಿಸುವ ಇವತ್ತಿನ ದಿನಗಳಲ್ಲಿ ಬಾಲ್ಯದ ದೀಪಾವಳಿ ಯಾವುದೋ ಲೋಕದ ಅನೂಹ್ಯ ಅನುಭವದಂತೆ ತೋರುತ್ತದೆ.


ನಿಮಗೆಲ್ಲರಿಗೂ ದೀಪಾವಳಿಯ ಶುಭಾಶಯಗಳು.

ಕವನ



ವಿ. ಪ್ರಸನ್ನ ಕುಮಾರ

## ನಡೆದೊಂದು ತಾಸಲ್ಲಿ ಪ್ರಕೃತಿಯ ಕಂಡೆ



ಹೊರಟಾಗ ಕವಿದಿತ್ತು ಕಾರ್ಮೋಡ ಮಂಜು
ಛತ್ರಿಯದು ಕೈಲಿತ್ತು ಹಿಡಿದಂತೆ ಪಂಜು

ನಡೆದಂತೆ ಕರಗಿತ್ತು ಹಿಮದ ಆ ಹೊದಿಕೆ
ಪ್ರಕೃತಿಯು ತೊಟ್ಟಂತೆ ಹೊಸದೊಂದು ರವಿಕೆ

ಬಾಂಧವ್ಯ ಹೆಚ್ಚಿಸಲು ಮಾಡಿದ್ದೆ ಕರೆಯ
ಸೌಂದರ್ಯ ಹೆಚ್ಚಿತ್ತು ಬಂದಂತೆ ಹರಯ

ಛಳಿಯಾಯ್ತೆ ನಿನಗೆ ಹಸಿರನ್ನು ತೊರೆದು
ನೀನ್ಯಾಕೆ ಕೆಂಪಾದೆ ಹಳೆದನ್ನು ನೆನೆದು??

ಸರಿಸಾಟಿಯುಂಟೆ ಓ ಪ್ರಕೃತಿ ನಿನ್ನೀಸೌಂದರ್ಯಕೆ
"ಸಂತೃಪ್ತಿ"ಯಲಿ ಕುಳಿತೆ ಅದನ್ನಾ ವರ್ಣಿಸಲಿಕೆ
ಏನೆಂದು ಬರೆಯಲಿ ಹೇಗಂತ ಬಣ್ಣಿಸಲಿ
ಅದೃಷ್ಟವಂತ ನಾನು ನಿನ್ನ ನೋಡಲೀ ಕಂಗಳಲಿ






Copyright © KCO – Brindavana

ಸಂಚಿಕೆ
೧೩
ನವೆಂಬರ್, ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ದೀಪಾವಳಿ- ಬಾಲ್ಯದ ನೆನಪಿನಂಗಳದಲ್ಲಿ…



ಶ್ರೀವಿದ್ಯಾ ಪ್ರಶಾಂತ್

**ಹ**ಬ್ಬಗಳು ಸದಾ ನಮ್ಮ ಮನೆ-ಮನಗಳನ್ನು ಬೆಳಗಿಸೋ ದೀಪಗಳು..ಅವು ನಮ್ಮ ಸಾಮಾಜಿಕ ಜೀವನದ ಅವಿಭಾಜ್ಯ ಅಂಗವಾಗಿದೆ. ಪ್ರಮುಖವಾಗಿ ದಸರಾ-ದೀಪಾವಳಿ ಮುಂತಾದ ಹಬ್ಬಗಳು ಎಲ್ಲರ ಮನೆ-ಮನಗಳನ್ನು ಹರ್ಷೋಲ್ಲಾಸದಿಂದ ತುಂಬುತ್ತದೆ.

ಇಂದು ನನ್ನ ಬಾಲ್ಯದ ದೀಪಾವಳಿ ಹಬ್ಬದ ಆ ಮೋಜಿನ ದಿನಗಳನ್ನು ಮೆಲಕು ಹಾಕಲು ಮತ್ತೆ ಆ ದಿನಗಳು ಮರಳಿ ಬರಬಾರದೇ ಎಂದೆನಿಸುತ್ತಿದೆ.

ನಮ್ಮ ದಕ್ಷಿಣ ಕನ್ನಡ, ಕಾನ್ವೆಂಟ್ ಶಿಕ್ಷಣ ಸಂಸ್ಥೆಗಳಿಂದ ತುಂಬಿಕೊಂಡಿರುವಂತಹ ಕ್ಷೇತ್ರ. ಹೀಗಾಗಿ ಶಾಲೆಗಳಲ್ಲಿ ಹಿಂದೂ ಧರ್ಮದ ಸಂಪ್ರದಾಯ-ಆಚರಣೆಗಳಿಗೆ ಹೆಚ್ಚಿನ ಆದ್ಯತೆ ಇರುತ್ತಿರಲಿಲ್ಲ. ಪ್ರತಿಯೊಂದು ಧರ್ಮವೂ ಅದರದೇ ಆದ ಕಟ್ಟುಪಾಡುಗಳನ್ನು ಒಳಗೊಂಡಿರುತ್ತದೆ, ಅದನ್ನು ಒಪ್ಪಿ ಅವರ ಸಂಸ್ಥೆಗೆ ಸೇರಿದ ಬಳಿಕ ಅಲ್ಲಿನ ನಿಯಮಗಳನ್ನು ಪಾಲಿಸುವುದು ನಮ್ಮ ಕರ್ತವ್ಯ ಎಂಬುದು ನನ್ನ ಭಾವನೆ.

ಎಂದಿನಂತೆಯೇ ಹತ್ತು ದಿನಗಳ ದಸರಾ ರಜೆಯ ಬಳಿಕ ಒಂದು ವಾರದಲ್ಲಿ ಕಿರುಪರೀಕ್ಷೆ ಇರುವಂತದ್ದು ಸರ್ವೇ ಸಾಮಾನ್ಯ. ಇದರ ನಡುವೆ ಮತ್ತೆ ಬರಲಿರುವ ವರುಷದ ಅತಿ ಸಂಭ್ರಮದ ದೀಪಾವಳಿ ಹಬ್ಬದ ಬಗ್ಗೆ ಯೋಚಿಸಿದರೆ-ಮಾತಾಡಿದರೆ ಖಂಡಿತವಾಗಿಯೂ ಅಪ್ಪ-ಅಮ್ಮ ಬೈಯ್ಯದೆ ಸುಮ್ಮನಿರರು. ಹೀಗಾಗಿ ಮತ್ತೆ ಓದಿನ ಕಡೆ ಗಮನ.

ಇನ್ನೇನು ದೀಪಾವಳಿ ಹಬ್ಬಕ್ಕೆ ಒಂದು ವಾರ ಇದೆ ಎನ್ನುತ್ತಿರುವಂತೆಯೇ ಸುತ್ತಮುತ್ತಲೂ ಹಬ್ಬದ ವಾತಾವರಣ ತುಂಬಲಾರಂಭಿಸುತ್ತದೆ. ಎಲ್ಲಾ ಅಂಗಡಿ ಮಳಿಗೆಗಳಲ್ಲೂ ರಿಯಾಯಿತಿ ದರದಲ್ಲಿ ವಸ್ತುಗಳ ಮಾರಾಟ, ಗ್ರಾಹಕರನ್ನು ತಮ್ಮ ಬಳಿ ಆಕರ್ಷಿಸಲು ವಿವಿಧ ಬಗೆಯ ಆಫರ್ಗಳು, ಬಣ್ಣ-ಬಣ್ಣದ ಮಿನಿಯೇಚರ್ಗಳಿಂದ ವಿಜ್ರಂಭಿಸುವ ದೊಡ್ಡ ಕಟ್ಟಡಗಳು ಹೀಗೆ ಇಡೀ ನಗರವೇ ಹಬ್ಬಕ್ಕೆ ಸನ್ನದ್ದರಾಗುತ್ತಿರುವಂತೆ ಭಾಸವಾಗುತ್ತಿತ್ತು.

ನನ್ನ ಅಮ್ಮನ ಮನೆಯಲ್ಲೂ ಅಷ್ಟೇ, ಎಲ್ಲವೂ ಸಂಸ್ಕಾರಯುತ ಸಾಂಪ್ರದಾಯಿಕ ಹಬ್ಬದ ಆಚರಣೆಗಳು. ಕಾನ್ವೆಂಟ್ ಶಾಲೆಗೆ ಹೋಗುತ್ತಿರುವಂತಹ ಮಕ್ಕಳಿಗೆ ಮನೆಯಲ್ಲಾದರು ಹಿಂದೂ ಧರ್ಮದ ಸಾಂಪ್ರದಾಯಿಕ ಆಚರಣೆಗಳು-ಅವುಗಳ ಪ್ರಾಮುಖ್ಯತೆ ಈ ಎಲ್ಲಾ ವಿಚಾರಗಳನ್ನು ನಮ್ಮ ಜೀವನದಲ್ಲೂ ಅಳವಡಿಸಿಕೊಳ್ಳಬೇಕೆಂಬುದು ನನ್ನ ಹೆತ್ತವರ ಆಶಯ.ಹಾಗಾಗಿ ಮೊದಲಿನಿಂದಲೂ ಅವರ ಹಿರಿಯರು ಕಲಿಸಿದ ಸಾಂಪ್ರದಾಯಿಕ ಆಚರಣೆಗಳನ್ನು ತುಂಬಾ ಕ್ರಮಬದ್ಧವಾಗಿ ಪಾಲಿಸುತ್ತಿದ್ದರು. ಹೀಗೆ ಹಿಂದೂ ಸಂಸ್ಕೃತಿಯ ಬಗ್ಗೆ ಅಪಾರವಾದ ಗೌರವ ಹಾಗೂ ವಿಶ್ವಾಸ ಮನೋಭಾವವಿರುವ ಹಿರಿಯರ ಒಡನಾಟದಲ್ಲಿ ಬೆಳೆಯುವಂತಹ ವಾತಾವರಣ ನಮ್ಮ ಮನೆಯಲ್ಲಿ.

ವರುಷವೂ ದೀಪಾವಳಿಗೆ ನಮ್ಮ ನೆರೆಮನೆಯ ಅಂಕಲ್ ಒಬ್ಬರು ಪಟಾಕಿ ಮಳಿಗೆಯನ್ನು ಪೇಟೆಯಲ್ಲಿ ಇಡುತ್ತಿದ್ದರು. ಅವರಿಗೆ ನಾವು ಮಕ್ಕಳೆಂದರೆ ಅಭಿಮಾನ-ಪ್ರೀತಿ…ಹೀಗಾಗಿ ಅವರು ನಮ್ಮ ಮನೆಗೆ ಬಂದು ತಮ್ಮ ಅಂಗಡಿಯಲ್ಲಿ ದೊರೆಯುವ ಪಟಾಕಿಗಳ ಲಿಸ್ಟನ್ನು ಅಪ್ಪನ ಬಳಿ ಕೊಟ್ಟು ಹೋಗುತ್ತಿದ್ದರು, ಆ ಲಿಸ್ಟ್ ಮನೆ ಸೇರುತ್ತಿದ್ದಂತೆ ನಮ್ಮ ಮನದಲ್ಲೂ ಹಬ್ಬದ ಸಂಭ್ರಮ ಮನೆ ಮಾಡುತ್ತಿತ್ತು.

ದೀಪಾವಳಿ ಎಂದ ಮೇಲೆ ಪಟಾಕಿ ಸುಡುಮದ್ದುಗಳ ಸದ್ದು ಇರಲೇ ಬೇಕು-ಆಗಲೇ ಈ ಹಬ್ಬಕ್ಕೆ ಒಂದು ಕಳೆ. ಆದರೆ ಪ್ರತೀ ಬಾರಿ ಪಟಾಕಿ ಖರೀದಿಸುವ ಸಂದರ್ಭದಲ್ಲಿ ಶಾಲೆಯಲ್ಲಿ ಗುರುಗಳು ಪಾಠ ಮಾಡುವಾಗ ಹೇಳುತ್ತಿದ್ದ ಎಚ್ಚರಿಕೆಯ ಮಾತುಗಳು ಸದಾ ನೆನಪಿಗೆ ಬರುವುದು..ಪಟಾಕಿ-ಸಿಡಿಮದ್ದುಗಳು ನಮ್ಮ ಸಂಭ್ರಮದ ಒಂದು ಅಂಶವಾಗಬೇಕೇ ಹೊರತು ಸಿರಿವಂತಿಕೆಯ-ಆಡಂಬರದ ವಸ್ತುವಾಗಬಾರದು. ಸಂಭ್ರಮ ಈಗ ಒಂದು ಸವಿನೆನಪಷ್ಟೇ.

ಈ ಮಾತು ಅಕ್ಷರ ಸಹ ಸತ್ಯ.ಅತಿಯಾದ ನಿರ್ಲಕ್ಷ್ಯದ ಪಟಾಕಿಯ ಬಳಕೆಯಿಂದ ಆಗುವ ಅನಾಹುತ-ಅವಘಢಗಳು, ಶಬ್ದ ಮಾಲಿನ್ಯ-ವಾಯು ಮಾಲಿನ್ಯ ಇತ್ಯಾದಿಗಳ ಬಗ್ಗೆ ಪ್ರತೀ ದೀಪಾವಳಿಗೂ ಎಚ್ಚರಿಸುತ್ತಿದ್ದರು. ಅಲ್ಲದೆ ನಮ್ಮ ಅಪ್ಪನಿಗೂ ಪಟಾಕಿ-ಸಿಡಿಮದ್ದುಗಳೆಂದರೆ ಹೆಚ್ಚಿನ ಆಸಕ್ತಿ ಇರುತ್ತಿರಲಿಲ್ಲ, ಆದರೂ ದೀಪಾವಳಿ ಪಟಾಕಿಗಳ ಸದ್ದಿಲ್ಲದೆ ಹಬ್ಬವೆನಿಸಲಾರದು ಎಂಬುವುದೇ ನಮ್ಮ ವಾದ..ಅಂತೂ-ಇಂತೂ ಅಪ್ಪನ ಮನ ಒಲಿಸಿ ಪಟಾಕಿ ಡಬ್ಬ ನಮ್ಮ ಮನೆ ಸೇರುತ್ತಿತ್ತು.ಆ ದಿನಗಳ ಸಾಧನೆಯ ಸಂಭ್ರಮ ಈಗ ಒಂದು ಸವಿನೆನಪಷ್ಟೇ.

ನನ್ನ ತಂಗಿ ಚಿತ್ರ ಕಲೆ ಕೈ ಕೆಲಸಗಳಲ್ಲಿ ಬಲು ಚತುರೆ. ಮನೆಯಲ್ಲಿ ಅಂಗಡಿಯಿಂದ ತಂದ ಆಕಾಶ ದೀಪವಿದ್ದರೂ ತನ್ನ ಕೈಯ್ಯಾರೆ ಮಾಡಿದ ಸಾಂಪ್ರದಾಯಿಕ ಶೈಲಿಯ ಗೂಡುದೀಪವನ್ನು ತಯಾರಿಸಿ ಬೆಳಗಿಸುವುದೆಂದರೆ ಬಲು ಮೋಜು. ಬಣ್ಣ-ಬಣ್ಣದ ಕಾಗದಗಳನ್ನು ಬಳಸಿ ಬಿದಿರಿನ ಕಡ್ಡಿಗಳಿಂದ ಮಾಡಿದ ಗೂಡುದೀಪದ ರಚನೆ. ಅಂತೂ -ಇಂತೂ ದೀಪಾವಳಿಯ ಮುಂಚಿನ ದಿನ ನೀರು ತುಂಬುವ ಹಬ್ಬದ ದಿನ ಮುಸ್ಸಂಜೆ ಹೊತ್ತಲ್ಲಿ ತನ್ನ ಕೈಯಿಂದ ರಚಿಸಲ್ಪಟ್ಟ ಗೂಡುದೀಪ ಬೆಳಗಲು ಅದೆಂತಹ ಹೆಮ್ಮೆ..ನೆನೆಯುತ್ತಿದ್ದಂತೆ ಈಗಲೂ ಹುಮ್ಮಸ್ಸು ಹೆಚ್ಚುತ್ತದೆ.

ಬಂದೇ ಬಿಟ್ಟಿತು ವರುಷದ ದೊಡ್ಡ ಹಬ್ಬ-ಬೆಳಕಿನ ಹಬ್ಬ ದೀಪಾವಳಿ. ಅಮ್ಮ ಪರೀಕ್ಷೆಯ ಸಂದರ್ಭದಲ್ಲಿ ಉದಯ ಕಾಲದಲ್ಲಿ ಎಬ್ಬಿಸಿದರೆ ಏಳಲು ಆಗುತ್ತಿದ್ದಂತಹ ಸಂಕಷ್ಟ, ಈ ದೀಪಾವಳಿ ಹಬ್ಬದ ನರಕಚತುರ್ದಶಿಯ ದಿನ ಅದೆಲ್ಲಿ ಮಾಯವಾಗುತ್ತಿತ್ತೊ? ತಿಳಿಯುತ್ತಿರಲಿಲ್ಲ. ರಾತ್ರಿ ಮಲಗುವಾಗಲೇ ಒಂದು ತರಹದ ಹುಮ್ಮಸ್ಸು- ಮರುದಿನ ಬೆಳಗ್ಗೆ ಎದ್ದು ಎಣ್ಣೆ ಸ್ನಾನ ಮಾಡಿ-ಹೊಸಬಟ್ಟೆ ಧರಿಸಿ ಹಿರಿಯರ ಆಶೀರ್ವಾದ ಪಡೆದು ಪಟಾಕಿ ಬಿಡುವ ಸಡಗರ ಆಗಲೇ ಮನೆಮಾಡಿತ್ತು. ಉದಯಕಾಲದಲ್ಲಿ ಅಮ್ಮನ ಒಂದೇ ಕರೆಗೆ ಏಳುತ್ತಿದ್ದಂತಹ ವರುಷದ ಏಕಮಾತ್ರ ದಿನವದು ಎನ್ನಬಹುದು.ಎಣ್ಣೆ ಸ್ನಾನದ ಬಳಿಕ, ಎಲ್ಲರೂ ಜೊತೆಗೂಡಿ ಪಟಾಕಿ-ಸುರ್-ಸುರ್ ಬತ್ತಿ ಹಚ್ಚಲು ಸಿಗುತ್ತಿದ್ದ ಆ ಸಂತೋಷ ಹೇಳತೀರದು. ಮರುದಿನ ಲಕ್ಷ್ಮೀ ಪೂಜೆ-ಈ ದಿನ ಅಕ್ಕ-ಪಕ್ಕದ ಮನೆಯವರು ತಮ್ಮ ಪೇಟೆಯಲ್ಲಿನ ಅಂಗಡಿ-ಮಳಿಗೆಗಳಲ್ಲಿ,ವ್ಯಾಪಾರ-ವ್ಯವಹಾರದ ಕ್ಷೇತ್ರಗಳಲ್ಲಿ ಲಕ್ಷ್ಮೀ ಪೂಜೆಗೈದು ಪ್ರಸಾದ ರೂಪದಲ್ಲಿ ಕೊಟ್ಟಂತಹ ಲಡ್ಡು-ಪೇಡಾ ಮೊದಲಾದ ಸಿಹಿ ತಿಂಡಿಗಳು ನಮ್ಮ ಮನೆಯ ಡಬ್ಬ ತುಂಬುತ್ತಿದ್ದವು. ತದನಂತರದ ದಿನವೇ ಬಲಿಪಾಡ್ಯಮಿ.ದಕ್ಷಿಣ ಕನ್ನಡದಲ್ಲಿ ಇದು ದೀಪಾವಳಿಯ ಪ್ರಮುಖ ಹಬ್ಬದಾಚರಣೆಯ ದಿನ. ಬಾಲ್ಯದಲ್ಲಿ ಅಜ್ಜನ ಮನೆಯೆಂದರೆ ಹೊಲ-ಗದ್ದೆಗಳಿಂದ ಕೂಡಿದ ಪರಿಸರ. ಹೀಗಾಗಿ ಪ್ರತಿವರುಷವೂ ಬಲೀಂದ್ರ ಪೂಜೆಯನ್ನು ಬಹಳ ವಿಜ್ರುಂಬಣೆಯಿಂದ ನಡೆಸುವ ಸಂಪ್ರದಾಯವಿತ್ತು. ಈ ದಿನ ನಾವೆಲ್ಲರೂ ಸಂಸಾರ ಸಮೇತರಾಗಿ ಅಜ್ಜನ ಮನೆಯಲ್ಲಿ ಸೇರಿ ಜೊತೆಯಾಗಿ ಸಡಗರ-ಸಂಭ್ರಮದಿಂದ ಬಲೀಂದ್ರನ ಪೂಜೆ ಮಾಡುತ್ತಿದೆವು.



ಈ ಹಬ್ಬದ ಮತ್ತೊಂದು ವಿಶೇಷತೆ ಎಂದರೆ-ಎಕ್ಕ ಭಜನೆ-ಇದು ತುಂಬಾ ವಿಭಿನ್ನವಾದ ಹಾಗೂ ನನಗೆ ಬಲು ಪ್ರಿಯವಾದ ಹಾಗೂ ಮನದಲ್ಲಿ ಅಚ್ಚಳಿಯದೆ ನಿಂತ ಒಂದು ಆಚರಣೆ. ಕಾರ್ತಿಕ ಮಾಸದಲ್ಲಿ ಆ ಊರಿನ ಹತ್ತು ಸಮಸ್ತರಿಂದ ರಚಿಸಲ್ಪಟ್ಟ ಭಜನಾ ಸಂಘದ ಸದಸ್ಯರು ಮನೆ-ಮನೆಗೆ ತೆರಳಿ ಅಲ್ಲಿನ ವಿಶಾಲವಾದ ಅಂಗಳದ ಮದ್ಯಭಾಗದಲ್ಲಿ ದೊಡ್ಡ ಕಾಲುದೀಪವನಿಟ್ಟು ಅದರ ಸುತ್ತಲೂ ತಾಳ ಹೊಡೆಯುತ್ತಾ ಭಗವಂತನ ಸ್ತುತಿಗಳನ್ನು ಎಲ್ಲರೂ ಒಗ್ಗಟ್ಟಿನಿಂದ ಹಾಡಿ-ಕುಣಿದು ಭಜಿಸುವ ಪದ್ಧತಿ ಇಂದಿಗೂ ಕಣ್ಣ ಮುಂದೆ ನಿಂತಂತಿದೆ. ಬಲಿ ಪಾಡ್ಯಮಿಯ ಮತ್ತೊಂದು ಪ್ರಮುಖ ಆಚರಣೆ ಎಂದರೆ ಬಲಿಯ ಸ್ವಾಗತ. ಈ ದಿನ ತಡರಾತ್ರಿ ಕತ್ತಲ್ಲಿ ಜೀಟಿಗೆ ಹಿಡಿದುಕೊಂಡು ಅಜ್ಜನ ಜೊತೆ ಗದ್ದೆ ಬಳಿ ತೆರಳಿ ಬಲಿ ಚಕ್ರವರ್ತಿಯನ್ನು ಹಾಡಿ-ಪೊಗಳಿ -ಕರೆದು ಪೂಜೆಗೈದು ಬಂದಾಗ ಅದೇನೋ ಹೇಳಲಾಗದ ಆನಂದ..ಇಂದು ಆ ಸಂಪ್ರದಾಯಗಳು ನಶಿಸಿ ಹೋಗುತ್ತಿವೆ ಎಂದೇ ಹೇಳಬಹುದು.

(… ಮುಂದಿನ ಪುಟಕ್ಕೆ)


Copyright © KCO – Brindavana

ಸಂಚಿಕೆ
೧೩
ನವೆಂಬರ್, ೨೦೧೬

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಅಮೆರಿಕ ಪ್ರವಾಸ ೨೦೧೬



ಅಂಬಿಕಾ ಸತ್ಯ ನಾರಾಯಣ

ನಾನು ಅಮೆರಿಕೆಗೆ ಬಂದು ೫ ತಿಂಗಳಾಯಿತು, ಬಂದ ಉದ್ದೇಶ ಬೇಸಿಗೆ ರಜೆಯಲ್ಲಿ ಮಕ್ಕಳು, ಮೊಮ್ಮಕ್ಕಳ ಜೊತೆಯಲ್ಲಿ ಸಂತೋಷದಿಂದ ಕಾಲ ಕಳೆಯಲೆಂದು. ಬಂದ ಮೇಲೆ ಸುತ್ತ ಮುತ್ತಾ ಏನೇನಿದೆ ಎಂದು ನೋಡಬೇಕೆಂಬ ಸಹಜ ಕುತೂಹಲ. ಹಾಗಾಗಿ ಮಕ್ಕಳ ಜೊತೆ ಎಲ್ಲಾ ಕಡೆ ಸುತ್ತಾಟ. ಮೊದಲು ನೋಡಲು ಅವಕಾಶ ಸಿಕ್ಕಿದ್ದು ಎಡಿಸನ್ ನಗರದಲ್ಲಿರುವ "ಕೃಷ್ಣ ವೃಂದಾವನ". ಅಂದು ಕಡಗೋಲು ಕೃಷ್ಣ, ರಾಯರ ಬೃಂದಾವನ ಮತ್ತು ಆಂಜನೇಯ ಸ್ವಾಮಿ ದೇವರುಗಳ ಪ್ರತಿಷ್ಠಾಪನ ಮಹೋತ್ಸವ- ಎಂತಹ ಸುದಿನ, ಬಹಳ ವಿಜೃಂಭಣೆಯಿಂದ ನಡೆದ ಆ ಕಾರ್ಯಕ್ರಮದಲ್ಲಿ ನನಗೂ ಭಾಗವಹಿಸುವ ಭಾಗ್ಯ. ದೇವರ ದರುಶನ ಕಣ್ಣಿಗೆ ಹಬ್ಬ, ಮನಸ್ಸಿಗೆ ಆನಂದ. ಎಷ್ಟು ನೋಡಿದರೂ ಮತ್ತೆ ಮತ್ತೆ ನೋಡಬೇಕೆಂಬ ಹಂಬಲ (ಆ ಕಾರಣದಿಂದಲೇ ಎಂಟು ಹತ್ತು ಬಾರಿ ದೇವಸ್ಥಾನಕ್ಕೆ ಹೋಗಿ ಬಂದಿದ್ದೇನೆ). ನಂತರ ಶ್ರೀ ಶ್ರೀ ಶ್ರೀ ಸುಗುಣೇಂದ್ರ ಸ್ವಾಮಿಗಳ ಕೈಯಿಂದ ಪ್ರಸಾದ ಸ್ವೀಕರಿಸುವ ಅದೃಷ್ಟ. ಇಷ್ಟಾದ ಮೇಲೆ ದೇವಸ್ಥಾನದ ಇತಿಹಾಸ ತಿಳಿಯುವ ಕುತೂಹಲದಿಂದ ನಮ್ಮ ಮನವಿಗೆ ಸ್ಪಂದಿಸಿ, ತಮ್ಮ ಬಿಡುವಿಲ್ಲದ ಕಾರ್ಯಕ್ರಮದ ನಡುವೆ ನಮಗೆ ವಿವರ ನೀಡಿದ ಕಾರ್ಯನಿರ್ವಾಹಕರಾದ ಶ್ರೀಯೋಗೇಂದ್ರ ಭಟ್ಟರಿಗೆ ನನ್ನ ಕೃತಜ್ಞತೆ.



**ನ್ಯೂಯಾರ್ಕ್ ಮಹಾನಗರ:** ಎಲ್ಲಿ ನೋಡಿದರೂ ಗಗನ ಚುಂಬಿ ಕಟ್ಟಡಗಳು, ವಾಲ್ ಸ್ಟ್ರೀಟ್ ನಲ್ಲಿರುವ ಬಿಗ್-ಬುಲ್, ಅಮೆರಿಕಾ ಸ್ವತಂತ್ರ ದೇವತೆ (Statue of Liberty), ವಿಶ್ವವಾಣಿಜ್ಯ ಕೇಂದ್ರದ ಕಟ್ಟಡ (New WTC) ಟೈಮ್ ಸ್ಕ್ವೇರ್, ರಾಕಾಫೆಲ್ಲರ್ ಸಂಕೀರ್ಣ. ನನಗೆ ನೆನಪು ಬಂದಿದ್ದು ೧೬ ವರ್ಷ ಹಿಂದೆ ನಡೆದ ಭೀಕರ ದುರಂತ. ಆ ಜಾಗ ಕಣ್ಣಾರೆ ನೋಡಿದಾಗ ಮನಸ್ಸಿಗೆ ಬಹಳ ನೋವಾಯಿತು, ಮತ್ತದೇ ಜಾಗದಲ್ಲಿ ನಿರ್ಮಾಣ ಮಾಡಿರುವ ಕೊನೆಯಿಲ್ಲದ ಕೊಳ (Endless Pool) ವೀಕ್ಷಣೆ. ಒಂದು ನಿಮಿಷ ಅಲ್ಲೇ ನಿಂತು ಮನಸಲ್ಲೇ, ಎಲ್ಲಡೆ ಶಾಂತಿ ಸೌಹಾರ್ದತೆ ನೆಲಸಲಿ ಎಂದು ಪ್ರಾರ್ಥಿಸಿದೆ. ನ್ಯೂಯಾರ್ಕ್ ನಗರದ ಬಗ್ಗೆ ಜನರು ಹೇಳುವುದು ಕೇಳಿದ್ದೆ, ನಾನು ನೋಡಿದಾಗ ಗೊತ್ತಾಯಿತು ಎಂತ ಚಂದದ ನಗರವೆಂದು.

**ಶಾರದಾಂಬೆ ದರ್ಶನ :** ಸ್ಟ್ರೋಡ್ಸ್ ಬರ್ಗ್, ಪೆನ್ಸಿಲ್ವೇನಿಯಾದಲ್ಲಿರುವ ಶ್ರೀ ಶಂಕರ ಮಠ ದೇವಸ್ಥಾನ, ಒಂದು ಅದ್ಭುತ ತಾಣ ಕೂಡ. ಪ್ರಕೃತಿ ದಟ್ಟವಾದ ಕಾಡು, ಪರ್ವತಗಳ ನಡುವೆ, ಸುತ್ತ ಹಸಿರುವನದ ಮಧ್ಯ ಅರಳಿ ನಿಂತಿರುವ ದೇವರ ಗುಡಿ, ಒಳಗೆ ಗರ್ಭ ಗುಡಿಯಲ್ಲಿ ಶಾರದೇ! ಪಕ್ಕದಲ್ಲಿ ಚಂದ್ರ ಮೌಳೀಶ್ವರನ ದರುಶನ. ಹತ್ತಿರದಲ್ಲೇ ಮಹಾಪ್ರಸಾದ ಕೂಡ, ಪ್ರಸಾದದಲ್ಲಿ ಸಿಹಿ ಭಕ್ಷ್ಯಗಳು, ಬಗೆ ಬಗೆಯ ತಿನಿಸುಗಳು ದೊರೆಯಿತು. ದೇವಸ್ಥಾನಕ್ಕೆ ಹಿಂದುರುಗಿ ನಿಶ್ಶಬ್ಧ ವಾತಾವರಣದಲ್ಲಿ ಮೌನವಾಗಿ ದೇವರಿಗೆ ಪ್ರಾರ್ಥನೆ!

**ಬೃಂದಾವನ ನ್ಯೂಜೆರ್ಸಿ ಕನ್ನಡ ಸಂಘ:** "ಬೃಂದಾವನ", ಕನ್ನಡ ಸಂಘದವರು ಮಾಡುತ್ತಿರುವ ಕೆಲಸ ತುಂಬಾ ಶ್ಲಾಘನೀಯ. ವನ ವಿಹಾರ(picnic) ಮಜವೋ ಮಜಾ ಬೆಳಗ್ಗೆಯಿಂದ ಸಂಜೆಯವರೆಗೂ ವಿವಿಧ ಆಟಗಳು, ಸ್ಪರ್ಧೆಗಳು. (ಎಲ್ಲಾ ವಯೋಮಾನದವರಿಗೂ). ನಾನು ಕೂಡ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದು ಒಂದು ಅವಿಸ್ಮರಣೀಯವಾದ ಅನುಭವ. ಇದಲ್ಲದೆ ಬೃಂದಾವನ ಗಣೇಶ ಹಬ್ಬದಲ್ಲಿ, ಪುಟ್ಟ ಪುಟ್ಟ ಮಕ್ಕಳು ಸಂಭ್ರಮದಿಂದ ಗಣೇಶ ಮೂರ್ತಿಯನ್ನು ನಿರ್ಮಿಸಿ ಶ್ರದ್ಧೆಯಿಂದ ಪೂಜೆ ಸಲ್ಲಿಸಿದ್ದು ನೋಡಲು ಸುಂದರವಾಗಿತ್ತು. ಇದರ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ವೇಷ - ನಾಟಕ, ಸುಧಾ ಬರಗೂರ್ ಅವರ ಹಾಸ್ಯ ಕಾರ್ಯಕ್ರಮ, ತರಂಗ ವಾದ್ಯ ಕಾರ್ಯಕ್ರಮ ನೋಡಲು ಆನಂದವಾಗಿತ್ತು.

ಬೃಂದಾವನ ಕನ್ನಡ ಶಾಲೆಗೆ ನಾನು ಭೇಟಿ ಕೊಟ್ಟಾಗ ನೋಡಿದ್ದು ಅಮೆರಿಕದಲ್ಲೇ ಬೆಳೆದ ಪುಟಾಣಿ ಮಕ್ಕಳು ಉತ್ಸಾಹದಿಂದ ಕನ್ನಡ ಕಲಿಕೆಯಲ್ಲಿ ತೊಡಗಿದ್ದು ನೋಡಿ ತುಂಬಾ ಸಂತೋಷವಾಯಿತು, ಅಷ್ಟೇ ಉತ್ಸಾಹದಿಂದ ಜವಾಬ್ದಾರಿಯುತವಾಗಿ ಕನ್ನಡ ಬೋಧನೆ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ನನ್ನ ಅಭಿನಂದನೆಗಳು!

**ಆತ್ಮೀಯ ಆಹ್ವಾನ:** ನನ್ನ ಮಗನ ಸ್ನೇಹಿತ ಬಂಧುಗಳ ಮನೆಯಲ್ಲಿ ಗಣೇಶ ಪೂಜೆ, ಸತ್ಯನಾರಾಯಣ ಪೂಜೆ, ನವರಾತ್ರಿ ಪೂಜೆ ಜೊತೆಗೆ, ಸಂತೋಷಕೂಟಗಳಿಗೆ ದೊರೆತ ಆತ್ಮೀಯ ವಿಶ್ವಾಸ ಪೂರ್ವಕ ಆದರದ ಆಮಂತ್ರಣಗಳು! ಭೇಟಿ ಕೊಟ್ಟಾಗ ಎಲ್ಲರ ಮನೆಯಲ್ಲೂ ನನಗೆ ದೊರೆತ ಪ್ರೀತಿ, ವಿಶ್ವಾಸ ಪೂರ್ವಕ ವಿಶೇಷ ಆತಿಥ್ಯಗಳನ್ನು ನಾನು ಜೀವಿತದಲ್ಲಿ ಮರೆಯಲು ಸಾಧ್ಯವಿಲ್ಲ. ನವರಾತ್ರಿ ಹಬ್ಬಗಳಲ್ಲಿ ನಾನು ಗಮನಿಸಿದ ಅಂಶವೆಂದರೆ ಶ್ರದ್ಧೆಯಿಂದ ಎಲ್ಲರೂ ಕೂಡಿ ಪೂಜೆಯಲ್ಲಿ ಭಾಗವಹಿಸುವುದು. ಗೊಂಬೆ ಹಬ್ಬದಲ್ಲಿ ಪಟ್ಟದ ಗೊಂಬೆಯಿಂದ ಹಿಡಿದು ತರತರಹದ ಗೊಂಬೆಗಳನ್ನು ೮-೧೦ ಮೆಟ್ಟಿಲುಗಳಲ್ಲಿ ಕೂರಿಸಿ ಎಲ್ಲರ ಜೊತೆ ಸಂಭ್ರಮದ ಆಚರಣೆ. ಒಂದು ಬಗೆಯಲ್ಲಿ ನಮ್ಮ ಸಂಸ್ಕೃತಿ ಸಂಪ್ರದಾಯದ ಮಹತ್ತರದ ಸಂದೇಶ ಮುಂದಿನ ಯುವ ಜನತೆಯಲ್ಲಿ ಮೂಡುವಂತಾಗಿದೆ.

**"ಮುಸ್ಸಂಜೆ ಮಾತು"** ರೇಡಿಯೋ ಕಾರ್ಯಕ್ರಮದಲ್ಲಿ ಭಾಗವಹಿಸಿ ಎಲ್ಲರೊಡನೆ ನನ್ನ ಅಮೆರಿಕಾ ಪ್ರವಾಸದ ಅನುಭವವನ್ನು ಹಂಚಿ ಕೊಂಡಿದ್ದು ತುಂಬಾ ಖುಷಿ ಕೊಟ್ಟ ವಿಚಾರ. ಇದಕ್ಕೆ ಅವಕಾಶ ಮಾಡಿಕೊಟ್ಟ RJ ಉಷಾ ಅವರಿಗೆ ನನ್ನ ವಂದನೆಗಳು.

**ದೀಪಾವಳಿ:** ೯ ವರುಷಗಳ ನಂತರ ಮೊಮ್ಮಕ್ಕಳ ಜೊತೆ ಆಚರಿಸುವ ಸುಯೋಗ. (ವಿಶೇಷವೆಂದರೆ ನ್ಯೂಜೆರ್ಸಿಯ ರಾಜಪಾಲರಾದ ಕ್ರಿಸ್ ಕ್ರಿಸ್ಟಿ ಅವರು ಇತ್ತೀಚೆಗಷ್ಟೇ ಹೊರಡಿಸಿದ ಕಾನೂನಿನ ಪ್ರಕಾರ ಪಟಾಕಿ ಹಚ್ಚುವದಕ್ಕೆ ಅನುಮತಿ ದೊರಕಿದೆ) ನಮ್ಮ ರಸ್ತೆ - ಕಾರ್ಡಿನಲ್ ಕೋರ್ಟಿನಲ್ಲಿ ನಮ್ಮ ನೆರೆ-ಹೊರೆಯ ಸುಮಾರು ೧೦ ಕುಟುಂಬದ ಸದಸ್ಯರೆಲ್ಲರೂ ಒಟ್ಟಿಗೆ ದೀಪಗಳ ಜೊತೆ ಪಟಾಕಿ ಹಚ್ಚಿ ಸಂಭ್ರಮಿಸಿದರು, ಹಬ್ಬದ ಸಲುವಾಗಿ ನಮ್ಮ ಮನೆಯಲ್ಲಿ ಏರ್ಪಾಡಾಗಿದ್ದ ಸಂತೋಷಕೂಟದಲ್ಲಿ ಭಾಗವಹಿಸಿ ಎಲ್ಲರ ಜೊತೆ ಖುಷಿ ಹಂಚಿಕೊಂಡ ಅನುಭವ ಅವರ್ಣನೀಯ.

ಹೀಗೇ ಹೇಳುತ್ತಾ ಹೋದರೆ ಇದೇ ಒಂದು ದೊಡ್ಡ ಕಥಾನವಾದೀತು, ೬ ತಿಂಗಳ ಸುಖಾನುಭವ ಹೊತ್ತು ನವೆಂಬರ್ ತಿಂಗಳ ಕೊನೆಯಲ್ಲಿ ನಮ್ಮ ಬೆಂಗಳೂರಿಗೆ ಹೊರಟಿದ್ದೇನೆ. ಮತ್ತೆ ಬಂದಾಗ ಭೇಟಿ ಮಾಡೋಣ, ನಿಮ್ಮೆಲ್ಲರ ಜೊತೆ ಅನುಭವ ಹಂಚಿಕೊಳ್ಳಲು ಅವಕಾಶ ಮಾಡಿ ಕೊಟ್ಟ 'ಬೃಂದಾವನ ವಾಣಿ' ಸಂಪಾದಕ ವರ್ಗಕ್ಕೆ ನನ್ನ ಧನ್ಯವಾದಗಳನ್ನು ತಿಳಿಸುತ್ತೇನೆ. ●

(...ಹಿಂದಿನ ಪುಟದಿಂದ)

ಈಗಿನ ವೈಜ್ಞಾನಿಕ ಯುಗದಲ್ಲಿ ತ್ವರಿತ ಗತಿಯಲ್ಲಿ ಮುನ್ನುಗ್ಗುತ್ತಿರುವಂತಹ ಜೀವನ ಶೈಲಿಯಲ್ಲಿ ವಿದೇಶದಲ್ಲಿ ನೆಲಸಿರುವ ನಾವು, ನಮ್ಮ ಸಂಪ್ರದಾಯ-ಆಚರಣೆ-ಜೀವನಾ ಪದ್ಧತಿ-ನಿಯಮಗಳನ್ನು ಹೇಗೆ ಮುಂದಿನ ಪೀಳಿಗೆಗೆ ಹಸ್ತಾಂತರಿಸಬಹುದು ಎಂಬುದೇ ನನ್ನ ಬಹುದೊಡ್ಡ ಪ್ರಶ್ನೆಯಾಗಿತ್ತು? ಆದರೆ ಯಾವ ಋಣಾನುಬಂಧವೋ-ದೈವಾನುಗ್ರಹವೋ ಎಂಬಂತೆ ಈ ದೂರದ ಅಮೇರಿಕಾ ದೇಶದಲ್ಲಿಯೂ ನಮ್ಮ ಸಂಪ್ರದಾಯಗಳನ್ನು-ಆಚರಣೆಗಳನ್ನು ಪಾಲಿಸಿಕೊಂಡು ಬರಲು ಪೂರಕವಾಗಿ ಎಂಬಂತೆ ದಕ್ಷಿಣ ಕನ್ನಡದ ಉಡುಪಿ ಕ್ಷೇತ್ರದಿಂದ ನಮ್ಮನ್ನು ಸದಾ ಹರಸಲು, ಶ್ರೀಕೃಷ್ಣ ಸಪ್ತಸಾಗರದಾಚೆಯ ಈ ದೇಶಕ್ಕೆ ಪುತ್ತಿಗೆ ಶ್ರೀಗಳಾದ ಶ್ರೀ ಸುಗುಣೇಂದ್ರ ತೀರ್ಥರ ನೇತೃತ್ವದಲ್ಲಿ ಬಂದು ನ್ಯೂಜೆರ್ಸಿಯ ಎಡಿಸ್ಸನಿನ ಪುತ್ತಿಗೆ ಶ್ರೀಕೃಷ್ಣ ವೃಂದಾವನದಲ್ಲಿ ನೆಲೆನಿಂತು ಧಾರ್ಮಿಕ ಕಾರ್ಯಕ್ರಮಗಳಿಂದ ಸದಾ ಪೂಜಿಸಲ್ಪಡುತ್ತಿದ್ದಾನೆ ಭಗವಂತ. ಇದರಿಂದ ನಮ್ಮ ಪರಂಪರೆ-ಆಚಾರ-ವಿಚಾರಗಳನ್ನು ಮುಂದಿನ ಪೀಳಿಗೆಯಲ್ಲೂ ಅನುಸರಿಸುವಂತೆ ಹಾಗೂ ನಮ್ಮ ಸಂಸ್ಕೃತಿಯ ವಿಭಿನ್ನತೆಯನ್ನು ಯುವ ಜನಾಂಗಕ್ಕೆ ತಿಳಿಸಿ ಕೊಡಲು ತುಂಬಾ ಅನುಕೂಲವಾಗುತ್ತಿದೆ. ಹಿಂದೂ ಧರ್ಮದ ಅದೆಷ್ಟೋ ಆಚರಣೆಗಳು ನಶಿಸಿ ಹೋಗುತ್ತಿರುವಂತಹ ಈ ಸಮಯದಲ್ಲಿ, ನಾವೇ ಮುಂದು ನಿಂತು ಅದನ್ನು ನಿಷ್ಠೆಯಿಂದ ಪಾಲಿಸಿ ಮುಂದಿನ ಪೀಳಿಗೆಗೆ ಮಾದರಿಯಾಗಿರುವುದು ನಮ್ಮೆಲ್ಲರ ಕರ್ತವ್ಯ ಅಷ್ಟೇ ಅಲ್ಲದೆ ಇದರಿಂದ ಉತ್ತಮ ಸಮಾಜ ನಿರ್ಮಾಣವು ಸುಲಭ ಸಾಧ್ಯ ಎಂಬುವುದು ನನ್ನ ವಿಶ್ವಾಸ. ●


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



# ಚಿತ್ರರಂಗ ಕಂಡ ರಾಜ್ಯೋತ್ಸವ



ಮಮತಾ ನಾಗೇಂದ್ರ

ಇತ್ತೀಚೆಗೆ ಮಾಯಾ ಕನ್ನಡಿಯಂತಿರುವ ಮೊಬೈಲ್ ನಲ್ಲಿ ಬಂದ ಒಂದು ವಿಡಿಯೋ ಸಂದೇಶ ನೋಡಿ ಅಚ್ಚರಿ ಹಾಗು ಆನಂದವಾಯಿತು. ಅದೇನೆಂದರೆ ಒಬ್ಬ ಜಪಾನ್ ದೇಶದವ "ನಾವಾಡುವ ನುಡಿಯೇ ಕನ್ನಡ ನುಡಿ", " ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು" ಎಂಬ ಜಪಾನೀ ಉಚ್ಚಾರದ ಕನ್ನಡ ಹಾಡು ಹಾಡುತ್ತಿದ್ದ ಅವನ ಬಾಯಲ್ಲಿ ಕನ್ನಡದ ಹಾಡು ಕೇಳಿ ಆನಂದವಾಯಿತು. ಆನಂತರದ ಸಂದರ್ಶನದಲ್ಲಿ ಅವನು ಕನ್ನಡ ಕಲಿತು ಮಾತಾಡಬೇಕು ಎಂದಾಗ ಎಲ್ಲಿಯ ಜಪಾನ್ ಎಲ್ಲಿಯ ಕನ್ನಡ ಎತ್ತಣಿಂದೆತ್ತ ಸಂಬಂಧವಯ್ಯ! ಎಂದು ಅಚ್ಚರಿಯಾಯಿತು. "ಹಿತ್ತಲ ಗಿಡ ಮದ್ದಲ್ಲ" ಎಂದು ಅನ್ಯ ಭಾಷೆಯ ಮೇಲೆ ಹೆಚ್ಚಿನ ವ್ಯಾಮೋಹವಿರುವ ನಮಗೆ ನಾಚಿಕೆಯಾಗಬೇಕು ಎಂದೆನಿಸಿತು, ಆ ವಿಷಯ ಹಾಗಿರಲಿ!!. ಒಂದು ಚಿತ್ರಗೀತೆಯು ಈ ಮಟ್ಟಿನ ಪ್ರಭಾವ ಬೀರಬೇಕು ಎಂದರೆ ಅದು ಭಾಷೆಯ ವೈಶಿಷ್ಟ್ಯವೇ ಸರಿ. ನಮ್ಮ ದೇಶದಲ್ಲಿ ಪ್ರತಿಯೊಬ್ಬ ಜನಸಾಮ್ಯಾನನಿಗೆ ಸುಲಭವಾಗಿ ತಲುಪುವ ಮಾಧ್ಯಮವೆಂದರೆ ದೃಶ್ಯ ಮಾಧ್ಯಮ. ಅದರಲ್ಲೂ ಸಿನಿಮಾ ಎಂದರೆ ಉತ್ಪ್ರೇಕ್ಷೆಯಾಗಲಾರದು. ಒಂದು ಸರ್ವೇ ಪ್ರಕಾರ ಯಾವುದಾದರೊಂದು ಹಾಡನ್ನು ತಕ್ಷಣ ಹೇಳಿ ಎಂದಾಗ ನೂರಕ್ಕೆ 80 ಜನ ಹೇಳಿದ್ದು ಸಿನಿಮಾ ಹಾಡನ್ನೇ! ಎಂದರೆ ಅದರ ಪ್ರಭಾವ ಹೇಗಿದೆ ಎಂದು ಊಹಿಸಬಹುದು. ಈ ಲೇಖನದಲ್ಲಿ ಕನ್ನಡ ಚಿತ್ರರಂಗದ ಚರಿತ್ರೆಯನ್ನಾಗಲಿ,ನಡೆದು ಬಂದ ಹಾದಿಯನ್ನಾಗಲಿ, ಚಲನಚಿತ್ರದ ಹೆಸರುಗಳು, ಗೀತೆಗಳು, ನಾಯಕ-ನಾಯಕಿಯರು, ನಿರ್ದೇಶಕ- ನಿರ್ಮಾಪಕ ಮುಂತಾದವಗಳ ಪಟ್ಟಿಮಾಡಲು ಹೊರಟಿಲ್ಲ, ಆದನ್ನು ಪಟ್ಟಿಮಾಡಲು ಹೊರಟರೆ ಬೃಹತ್ ಗ್ರಂಥವಾದಿತು. ಓದುಗರಿಗೆ ಈಗ ಆಗಲೇ ಇದರಬಗ್ಗೆ ಬಹಳಷ್ಟು ಹೆಚ್ಚಿನ ಮಾಹಿತಿಯಿದೆ. ಕನ್ನಡ "ರಾಜ್ಯೋತ್ಸವ"ವನ್ನು ಕನ್ನಡ "ನಿತ್ಯೋತ್ಸವ"ವನ್ನಾಗಿ ಮಾಡುವ ಪ್ರಯತ್ನದಲ್ಲಿ ಕನ್ನಡ ಚಿತ್ರೋದ್ಯಮದ ಕಾಣಿಕೆ ಅತ್ಯಮೂಲ್ಯವಾದುದು, ಈ ಲೇಖನದಿಂದ ಅದರ ಬಗ್ಗೆ ತಿಳಿಸುವ ಒಂದು ಸಣ್ಣ ಪ್ರಯತ್ನ.



ಕನ್ನಡ ನಾಡು-ನುಡಿ ಬೆಳವಣಿಗೆಯಲ್ಲಿ ಕನ್ನಡ ಚಿತ್ರರಂಗ(sandalwood)ದ ಕೊಡುಗೆ ಮಹತ್ತರವಾದುದು. ಕನ್ನಡ ಭಾಷೆಯ ಮಹತ್ವ ತಿಳಿಸುವ ಚಿತ್ರಗೀತೆಗಳಿಂದ ಹಿಡಿದು ಕನ್ನಡಿಗನ ಅಭಿಮಾನ, ಕೆಚ್ಚೆದೆ ತೋರುವ ಚಿತ್ರಕಥೆಗಳವರೆಗೆ, ಕರ್ನಾಟಕದ ನದಿ, ರಮ್ಯತಾಣಗಳಿಂದ ಹಿಡಿದು ಕವಿ, ಸಾಹಿತಿಗಳ ಕಥೆ ಕವನ ಕಾವ್ಯ ನಾಟಕ ಇತ್ಯಾದಿಗಳವರೆಗೆ, ಕಲೆ ಸಂಸ್ಕೃತಿಯಿಂದ ಹಿಡಿದು ತಿಂಡಿ ತಿನಿಸುಗಳ ಬಗ್ಗೆ ಎಲ್ಲದರಲ್ಲೂ ಚಿತ್ರರಂಗ ವಿಭಿನ್ನ ಪ್ರಯೋಗಗಳನ್ನು ಮಾಡಿದೆ. ಒಂದು ಸಮಯದಲ್ಲಿ ಕನ್ನಡದ ಬಗ್ಗೆ ಹಾಡಿಲ್ಲವೆಂದರೆ ಆ ಸಿನಿಮಾ ಹಿಟ್ ಆಗುತ್ತಿರಲಿಲ್ಲ ಎಂಬ ಮಾತಿತ್ತು!.

ಸತಿ ಸುಲೋಚನಾ(1934) ಚಲನಚಿತ್ರದಿಂದ ಕನ್ನಡ ಚಿತ್ರರಂಗ ಶುರುವಾಯಿತು. ಪೌರಾಣಿಕ ಕಥೆಗಳ ಮೂಲಕ, ನಾಟಕ ತದನಂತರ ಕಾದಂಬರಿ ಆಧಾರಿತ, ನಾಯಕ-ನಾಯಕಿ ಪ್ರಧಾನ, ಪತ್ತೇದಾರಿ ಕಥೆ, ಮಕ್ಕಳ ಸಿನಿಮಾ ಹೀಗೆ ಹತ್ತು ಹಲವು ಬಗೆಯ ಚಿತ್ರಗಳು ತಯಾರಾಗುತ್ತವೆ. ಚಿತ್ರರಂಗ, ಚಿತ್ರೋದ್ಯಮವಾಗಿ ಬೆಳದಿದೆ. ಸರಾಸರಿ 100 ಚಿತ್ರಗಳು ವರ್ಷಕ್ಕೆ ಬಿಡುಗಡೆಯಾಗುತ್ತವೆ.

ಕನ್ನಡ ಚಳುವಳಿ ಸಂದರ್ಭಗಳಲ್ಲಿ ಜನರನ್ನು ಒಂದೆಡೆ ಸೇರಿಸಲು ಸಿನಿಮಾಗಳು, ಗೀತೆಗಳು ಸಹಕಾರಿಯಾದವು. ಕೆಲವು ಚಿತ್ರಗಳ ಪ್ರಭಾವದಿಂದಾಗಿ ಜನರ ಜೀವನಶೈಲಿಯನ್ನೇ ಬದಲಾಯಿಸಿತು. ಉದಾಹರಣೆಗೆ "ಮಯೂರ", "ಬಂಗಾರದ ಮನುಷ್ಯ" ಮುಂತಾದ ಚಿತ್ರಗಳನ್ನು ನೋಡಿದ ಜನ ತಮ್ಮ ಮಕ್ಕಳು ಅವರಂತಾಗಲಿಯೆಂದು ಹೆಸರಿಡುತ್ತಿದ್ದರಂತೆ. ಹಲವರಿಗೆ ರೈತರಾಗಲು, ಕನ್ನಡ ಶಿಕ್ಷಕರಾಗಲು, ಸೈನಿಕರಾಗಲು ಹಲವು ಬಗೆಯ ಕೆಲಸ ಮಾಡಲು ಪ್ರೇರಣೆಯಾಯಿತು. ಹಲವಾರು ಕನ್ನಡ ಸಂಘಗಳು ಮತ್ತು ಅದರ ಕನ್ನಡ ಪರ ಚಟುವಟಿಕೆಗಳು ಹುಟ್ಟಲು ನಾಂದಿಯಾಯಿತು. "ಒಂದೇ ನಾಡು ಒಂದೇ ಕುಲವು(ಮೇಯರ್ ಮುತ್ತಣ್ಣ)" ಹಾಡು ಕೇಳಿ ಪ್ರಭಾವಿತರಾಗಿ ರಸ್ತೆ, ಶಾಲೆ, ಕೆರೆಗಳನ್ನು ಕಟ್ಟಿದರೆಂದು ಹಿರಿಯರಿಂದ ಕೇಳಿದ್ದೆ. ಅಷ್ಟರಮಟ್ಟಿಗೆ ಒಂದು ಚಿತ್ರ ಜನರಲ್ಲಿ ತನ್ನ ಛಾಪು ಮೂಡಿಸಿತ್ತು. ಈಗಿನ ನಮ್ಮ ಬೆಂಗಳೂರಿನ ಗುಂಡಿಗಳನ್ನು ಮುಚ್ಚಲು ಯಾವ ಚಿತ್ರ ಬರಬೇಕೋ ದೇವರೇ ಬಲ್ಲ!. "ಪ್ರೇಮಲೋಕ" ಚಿತ್ರ ಯುವ ಜನತೆಯನ್ನು ಕಾಲೇಜಿನತ್ತ ಸೆಳೆಯಿತು. ಇನ್ನುನಟ ಸಾರ್ವಭೌಮ ರಾಜಕುಮಾರ್ ಅವರು ಸ್ಪೂರ್ತಿಯ ಗಣಿ. ಅವರ ನಡೆ-ನುಡಿ, ಸಜ್ಜನಿಕೆ ಮತ್ತು ಸಿನಿಮಾ ನೋಡಿ ಮನಸೋತು ಬದಲಾದವರಿಗೆ ಲೆಕ್ಕವಿಲ್ಲ. ಅವರಂತೆ ಅಚ್ಚ ಕನ್ನಡದಲ್ಲಿ ಮಾತಾಡಬೇಕು ಎಂದು ಶ್ರೇಷ್ಠ ಕಲಾವಿದರೇ ಹೇಳಿದ್ದಾರೆ.

ಚಿತ್ರಗೀತೆಗಳ ವಿಷಯಕ್ಕೆ ಬರುವುದಾದರೆ ನೂರಾರು ಕನ್ನಡದ ಹಾಡುಗಳು ಕೇಳುಗನ ಮೈ ಮನ ತಣಿಸುತ್ತವೆ. ನಾಡು-ನುಡಿ, ನಾಡಿನ ಉದ್ದಗಲ, ಕಲೆ ಸಂಸ್ಕೃತಿ, ಹಬ್ಬ, ಉಡುಗೆ-ತೊಡುಗೆ, ತಿಂಡಿ ತಿನಿಸು ಅಬ್ಬಾ! ಒಂದೇ ಎರಡೇ ಎಷ್ಟೊಂದು ವೈವಿಧ್ಯ ಹಾಡುಗಳು. ಉದಾಹರಣೆಗೆ "ಅ ಆ ಇ ಈ ಕನ್ನಡದ ಅಕ್ಷರ ಮಾಲೆ" ಎಂಬ ಹಾಡು ವರ್ಣಮಾಲೆ ಕಲಿಸಲು, "ಕನ್ನಡಮ್ಮನ ದೇವಾಲಯ" ತಾಯಿ ಭುವನೇಶ್ವರಿ ವರ್ಣನೆ, "ಕನ್ನಡ ನಾಡಿನ ಕರಾವಳಿ" ಕರಾವಳಿಯ ಸೌಂದರ್ಯ, "ಮೈಸೂರು ದಸರಾ" ದಸರಾದ ಬಣ್ಣನೆ ಮಾಡಿದರೆ, "ತಾಜಾ ತಾಜಾ ಕಡಲೇಕಾಯಿ" ಬೆಂಗಳೂರಿನ ಸ್ಪೆಷಲ್ ಹೇಳುತ್ತದೆ. "ಮಲೆನಾಡ ಹೆಣ್ಣ ಮೈ ಬಣ್ಣ" ಗಂಡು ಹೆಣ್ಣಿನ ಚೆಲುವನ್ನು ಬಣ್ಣಿಸುವ ರೀತಿಯಾದರೆ, "ನಮ್ಮ ಕಡೆ ಬೋಂಡಾ ಅಂದರೆ " ಭಾಷೆಯ ಸೊಬಗನ್ನು ಬಣ್ಣಿಸುತ್ತದೆ. ಹೀಗೆ ಪಟ್ಟಿಮಾಡ ಹೊರಟರೆ ನೂರಾರು ಹಾಡುಗಳು ನಮ್ಮ ಕಣ್ಮುಂದೆ ಬರುತ್ತದೆ.



'ಹುಟ್ಟಿದರೆ ಕನ್ನಡ ನಾಡಲಿ ಹುಟ್ಟಬೇಕು', 'ಕನ್ನಡವೇ ನಮ್ಮಮ್ಮ', 'ನಾವಾಡುವ ನುಡಿಯೇ', 'ಕನ್ನಡ ರೋಮಾಂಚನವೀ' ಇತ್ಯಾದಿ ಹಾಡುಗಳನ್ನು ಕೇಳಿದಾಗ ನಮಗೆ ಗೊತ್ತಿಲ್ಲದಂತೆ ಗುನುಗುನಿಸುತ್ತೇವೆ ಮತ್ತು ಇಲ್ಲಿ ಯಾವುದೋ ಕನ್ನಡ ಕಾರ್ಯಕ್ರಮ ನಡೆಯುತ್ತಿದೆ ಎಂದರ್ಥ. ಇದೊಂಥರಾ ಕನ್ನಡ ಕಾರ್ಯಕ್ರಮಗಳ ಗೀತೆಗಳಾಗಿವೆ. ಈ ಹಾಡುಗಳಿಲ್ಲದಿದ್ದರೆ ಆ ಕನ್ನಡ ಕಾರ್ಯಕ್ರಮ ಅಪೂರ್ಣವಾದಂತೆ ಎಂಬ ಭಾವ.

ಕನ್ನಡ ಚಲನ ಚಿತ್ರಗಳಲ್ಲಿನ ಮುಖ್ಯವಾದ ಅಂಶ ಅಂದರೆ ಅದರಲ್ಲಿ ಅಳವಡಿಕೊಳ್ಳುವ ಕಥೆ-ಕವನಗಳು. ಜನರಿಗೆ ಎಷ್ಟೋ ಬಾರಿ ಕವನವನ್ನು ಬರೆದ ಕವಿ ಯಾರೆಂದು ಗೊತ್ತಿಲ್ಲದಿದ್ದರೂ ಅವರ ಕವನಗಳು ಚಿರಪರಿಚಿತ. ಹಾಗೆ ತ್ರಿವೇಣಿ, ತರಾಸು ಮುಂತಾದವರ ಕಾದಂಬರಿಗಳು ಜನಸಾಮಾನ್ಯನಿಗೆ ತಲುಪುವಂತೆ ಮಾಡಿದ್ದೇ ಈ ಚಿತ್ರರಂಗ. ಬಹಳಷ್ಟು ಕವಿಗಳು, ಸಾಹಿತಿಗಳು, ಬರಹಗಾರರು ಚಿತ್ರರಂಗದ ಮೂಲಕ ಪ್ರಖ್ಯಾತರಾಗಿದ್ದಾರೆ. ಹಾಗೆಯೇ ಕನ್ನಡ ಸಾಹಿತ್ಯ ಲೋಕದಿಂದ ಚಿತ್ರರಂಗ ಬೆಳೆಯಲು ಸಾಧ್ಯವಾಗಿದೆ.

ದೇಶ ವಿದೇಶಿಗರನ್ನು ಕನ್ನಡದತ್ತ ನೋಡುವಂತೆ ಮಾಡಿದವರು ಹೆಸರಾಂತ ನಿರ್ದೇಶಕರು, ನಿರ್ಮಾಪಕರು, ನಟ ನಟಿಯರು, ತಂತ್ರಜ್ಞರು. ಒಂದು ಕಾಲದಲ್ಲಿ ನಮ್ಮ ಕನ್ನಡ ಚಿತ್ರಗಳ ಗುಣಮಟ್ಟ ಎಷ್ಟಿತ್ತೆಂದರೆ ಅನ್ಯಭಾಷಿಗರು ಕನ್ನಡ ಸಿನಿಮಾ ಯಾವಾಗ ಬಿಡುಗಡೆಯಗುತ್ತದೋ ಎಂದು ಕಾಯುತ್ತಿದ್ದರು. ಅನ್ಯಭಾಷಿಗರು ಕನ್ನಡ ಚಿತ್ರರಂಗದಲ್ಲಿ ಕೆಲಸಮಾಡಬೇಕೆಂದು ಕನ್ನಡ ಕಲಿತು ಬರುತಿದ್ದರಂತೆ. ಇದಕ್ಕೆಲ್ಲ ಆ ಚಿತ್ರದಲ್ಲಿ ದುಡಿಯುವವರ ಭಾಷಾಭಿಮಾನ,ಶ್ರದ್ಧೆ, ಪರಿಶ್ರಮ, ಪ್ರೀತಿ, ತುಡಿತವೇ ಕಾರಣ. ಹಲವಾರು ರಾಷ್ಟ್ರೀಯ ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳು ಬಂದಿವೆ. ಬಿ.ವಿ.ಕಾರಂತರ ಚೋಮನ ದುಡಿ , ಗಿರೀಶ್ ಕಾರ್ನಾಡ್ ರ ಕಾಡು, ಪುಟ್ಟಣ್ಣ ನವರ ಚಿತ್ರಗಳು, ಗಿರೀಶ್ ಕಾಸರವಳ್ಳಿ ಯವರ ಚಿತ್ರಗಳು ಕೇವಲ ಹೆಸರಿಸಲು.


Copyright © KCO – Brindavana

ಸಂಚಿಕೆ
೧೩
ನವೆಂಬರ್, ೨೦೧೮



(...ಹಿಂದಿನ ಪುಟದಿಂದ )

ಶಂಕರ್ ನಾಗ್ ಅವರ 'ಮಾಲ್ಗುಡಿ ಡೇಸ್' ಅಂದಿನ ಕಾಲದಲ್ಲಿ ರಾಷ್ಟ್ರವ್ಯಾಪಿ ಮನೆಮಾತಾಗಿತ್ತು. ಇನ್ನು ಕಲಾವಿದರ ಪಟ್ಟಿಯಂತೂ ತುಸು ಉದ್ದವೇ. ಹೀಗೆ ಹಲವಾರು ಚಿತ್ರರಂಗದ ಮಂದಿ ಅವರವರ ಕೊಡುಗೆ ನೀಡಿದ್ದಾರೆ.

ಕೆಲವೊಂದು ಚಿತ್ರಗಳು ಸಾರ್ವಕಾಲಿಕ ದಾಖಲೆಗಳನ್ನು ಮಾಡಿದ್ದರೆ ಇನ್ನು ಕೆಲವು ಟ್ರೆಂಡ್ ಸೆಟ್ಟಿಂಗ್ ಮಾಡಿದ್ದು. ಮನೆಯಲ್ಲಿನ ಫೋಟೋಗಳನ್ನು ನೋಡಿದರೆ ಆ ಕಾಲದ fashion trend ತಿಳಿಯುತ್ತದೆ. ಉಡುಗೆ ತೊಡುಗೆ, ಹೇರ್ ಸ್ಟೈಲ್, ಮಾತು ಎಲ್ಲದರಲ್ಲೂ. ಕೇವಲ ಕನ್ನಡ ಮಾತ್ರವಲ್ಲದೆ ಅದರ ಸೋದರ ಭಾಷೆಯಂತಿರುವ ಕೊಡವ, ಕೊಂಕಣಿ, ತುಳು ಭಾಷೆಗಳ ಚಿತ್ರಗಳನ್ನು ಸಹ ಕನ್ನಡ ಚಿತ್ರರಂಗದಲ್ಲಿ ಕಾಣಬಹುದು. ಇದು ಸೋದರ ಸಮನ್ವತೆಯ ಸಂಕೇತವಲ್ಲದೆ ಮತ್ತೇನು.

ಕರ್ನಾಟಕ ಪ್ರವಾಸೋದ್ಯಮ ಬೆಳೆಯಲು ಚಿತ್ರರಂಗ ಪ್ರಮುಖ ಪಾತ್ರವಹಿಸಿದೆ. ಚಲನಚಿತ್ರಗಳನ್ನು ನೋಡಿ ಆ ಜಾಗಕ್ಕೆ ಬಹಳಷ್ಟು ಪ್ರವಾಸಿಗರು ಭೇಟಿ ಕೊಟ್ಟಿದ್ದಾರೆ. ಉದಾಹರಣೆಗೆ ಒನಕೆ ಓಬವ್ವನ ಕಥೆ ತಿಳಿದಿದ್ದರೂ ನಾಗರಹಾವು ಚಿತ್ರನೋಡಿ ಚಿತ್ರದುರ್ಗಕ್ಕೆ ಜನ ಲಗ್ಗೆ ಇಟ್ಟರಂತೆ. ನಾವು ಮೈಸೂರಿನವರೇ ಆದರೂ "ಸುಪ್ರಭಾತ' ಸಿನಿಮಾ ಬರುವವರಿಗೆ ನಮಗೆ ಚಾಮುಂಡಿ ಬೆಟ್ಟವನ್ನು ಅಷ್ಟು ಡಿಟೇಲ್ ಆಗಿ ನೋಡಿಯೇ ಇರಲಿಲ್ಲ. ಇಂದಿಗೂ ಅನೇಕ ಸ್ಥಳಗಳು ಚಿತ್ರದ ಮೂಲಕವೇ ಫೇಮಸ್ಸು. ಹೀಗೆ ಹಲವಾರು ಚಿತ್ರಗಳು ಕನ್ನಡ ನಾಡಿನ ಮೂಲೆ ಮೂಲೆಗಳನ್ನೂ ಮನೋಹರವಾಗಿ ಚಿತ್ರಿಸಿ ಕರ್ನಾಟಕಕ್ಕೆ ಪ್ರವಾಸಿಗರನ್ನು ಬರಸೆಳೆವಂತೆ ಮಾಡಿದೆ. ಈ ಮೂಲಕ ಕನ್ನಡ ತಾಯಿಯ ಆರಾಧನೆ ಮಾಡಿದೆ. ಹಾಗೆಯೇ ಕನ್ನಡಿಗ ಪ್ರೇಕ್ಷಕನಿಗೂ ವಿಶ್ವದ ಪ್ರವಾಸಿ ತಾಣಗಳನ್ನೂ ತೋರಿಸಲು ಪ್ರಯತ್ನಿಸುತ್ತಿದೆ.

ಕೊನೆಯದಾಗಿ ಎಲ್ಲಾ ಕನ್ನಡ ಕಾರ್ಯಕ್ರಮದ ಕೊನೆಯ ಹಾಡು "ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪ". ಈ ಹಾಡಿನ ತಾತ್ಪರ್ಯದಂತೆ ಎಲ್ಲಾ ಕುಲಗಳಿಗಿಂತಲೂ ಮಾನವ ಕುಲವೇ ದೊಡ್ಡದು, ಮಾನವತೆಯೇ ದೊಡ್ಡದು. ಮಾನವತಾವಾದದ ಜೊತೆಗೆ ನಮ್ಮ ಭಾಷೆಯನ್ನು ಪ್ರೀತಿಸೋಣ ಹಾಗೆಯೇ ಬೇರೆ ಭಾಷೆಗಳನ್ನು ಗೌರವಿಸೋಣ. ಕನ್ನಡ ಚಲನಚಿತ್ರಗಳನ್ನು ಎಲ್ಲರೊಂದಿಗೆ ಜೊತೆಗೂಡಿ ಚಿತ್ರಮಂದಿರದಲ್ಲಿಯೇ ನೋಡಿ ಪ್ರೋತ್ಸಾಹಿಸೋಣ. ಬೇರೆಯವರಿಗೆ ನೋಡಲು ಪ್ರೇರೇಪಿಸೋಣ. ಸವಿ ಕನ್ನಡದ ಕಂಪನ್ನು ಎಲ್ಲಡೆ ಪಸರಿಸೋಣ. ಕನ್ನಡ ರಾಜ್ಯೋತ್ಸವವನ್ನು ನಿತ್ಯೋತ್ಸವವನ್ನಾಗಿ ಮಾಡೋಣ!!. ●



ವೈಶಾಕ್ ಆರೆ ಚಂದ್ರಶೇಖರ

ಕವನ



ಲಕ್ಷ್ಮಿ ಕೊಲಾಲ್

### .....ಜೀವಿಸು ಕನ್ನಡ .......

ಸಮಯ ಸಂಯಮದ ಪರಿವೆ ಬೇಕಿಲ್ಲ
ಸವಿಗನ್ನಡದ ಮಾತನ್ನು ಕೇಳಲು
ದೂರ ಹತ್ತಿರದವರೆಂಬ ಧ್ವಂಧ್ವ ನಮಗಿಲ್ಲ
ಕನ್ನಡ ಭಾಷೆಯನ್ನೂ ಆಡಲು ...!

ಕಲ್ಪಿಸುತಾ ಕಣ್ಣಲೇ ನಿನ್ನಾ ಓ ಕನ್ನಡ ತಾಯೆ
ಆ ಕ್ಷಣವೆನಿತು ಚೆನ್ನಾ ...
ಅಕ್ಷರಗಳ ಅಭಿಷೇಕವಾ ಮಾಡಲು ದಿನವೂ
ಈ ಜೀವಕೆ ಏನೋ ಆನಂದಾ ...!

ಪದಗುಚ್ಛಗಳನು ತಂದು ನಿನ್ನಾ
ಪಾದಗಳಿಗರ್ಪಿಸುತಿರುವೆನು ....
ವಾಕ್ಯದಲ್ಲಿ ವರಮಾಲೆಯಾ ಹೆಣೆದು
ನಿನ್ನೆತ್ತರಕೆ ಸಮರ್ಪಿಸಿ ಧನ್ಯನಾದೆನು ...

ಬರೆದ ಒಲವಿನ ಕಥೆಗಳಲ್ಲಿ ನಿನ್ನಾ
ಪೀಠವನ್ನಲಂಕರಿಸುತ...
ನಿನ್ನಾ ಕಂದಮ್ಮಗಳ ನುಡಿಯಾ
ಕಂಬಗಳಾ ಮಂಟಪವಾ ನಿರ್ಮಿಸುತಾ..!

ಓ ಕನ್ನಡ ತಾಯೆ ನಿನ್ನಾ ಸೇವೆಯ
ಭಾಗ್ಯ ನಿತ್ಯವೂ ನಮಗಿರಲಿ
ಬನ್ನಿ ಕನ್ನಡ ಲೋಕಕೆ ಬೆಳಗಾಗಲಿ..
ಕನ್ನಡ ಭಾಷೆ ಎಲ್ಲೆಲ್ಲೂ ಜೀವಿಸಲಿ
..ಜೀವಿಸಲಿ...!!

## ನ್ಯೂಜೆರ್ಸಿಯಲ್ಲಿ ಕನ್ನಡ ರಾಜ್ಯೋತ್ಸವ

ನವೆಂಬೆರ್ ಬಂತೆಂದರೆ ಎಲ್ಲೆಡೆ ಕನ್ನಡ ಡಿಂಡಿಮ. ಕರ್ನಾಟಕದಲ್ಲಿ ಮಾತ್ರವಲ್ಲ, ನಮ್ಮ ಅಮೆರಿಕದಲ್ಲೂ ಕನ್ನಡ ರಾಜ್ಯೋತ್ಸವ ಆಚರಣೆ ಜೋರಾಗಿ ನಡೆಯುತ್ತೆ.

ಮೂರು ವರುಷದ ಹಿಂದೆ ಕೇವಲ ವಾಟ್ಸ್ಅಪ್ ಮೂಲಕ ನ್ಯೂಜೆರ್ಸಿಯಲ್ಲಿರುವ ಕೆಲ ಕನ್ನಡ ಗೆಳೆಯ ಗೆಳತಿಯರು ಒಂದು ಗೂಡಿ ಕನ್ನಡ ರಾಜ್ಯೋತ್ಸವದ ಆಚರಣೆಯನ್ನು ಪ್ರಾರಂಭ ಮಾಡಿದರು. ಈ ವರ್ಷವೂ ರಾಯಲ್ ಅಲ್ಬರ್ಟ್ ಪ್ಯಾಲೇಸ್ ನಲ್ಲಿ ೨೦೧೮, ನವೆಂಬೆರ್ ೫ ರಂದು ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಿದರು.

ನ್ಯೂಜೆರ್ಸಿ ಆದಿ ಚುಂಚನಗಿರಿ ಮಠದ ಶ್ರೀ ಶ್ರೀಶೈಲನಾಥ ಸ್ವಾಮಿಗಳು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಪ್ರಾರ್ಥನೆ, ಚಲನಚಿತ್ರ ಗೀತೆಗಳು, ಚಿಣ್ಣರಿಂದ ನೃತ್ಯ, ಮೂಖಾಭಿನಯ, ಮಹಿಳೆಯರ ನೃತ್ಯ, ಪುರುಷರ ನೃತ್ಯ ಕಾರ್ಯಕ್ರಮಗಳು ಎಲ್ಲರನ್ನೂ ರಂಜಿಸಿದರು.

ಕೊನೆಗೆ ಕನ್ನಡ DJ ಹಾಡುಗಳಿಗೆ ಎಲ್ಲರೂ ತಾಳ ಹಾಕಿ ಕುಣಿದರು.

ಒಟ್ಟಿನಲ್ಲಿ ನಾವು ಎಲ್ಲಿದ್ದರೂ, ಹೇಗಿದ್ದರೂ ಕನ್ನಡವ ಮರೆಯೋಲ್ಲ, ಕನ್ನಡದ ಜೊತೆಗೆ ನಾವು, ನಮ್ಮ ಜೊತೆಗೆ ಕನ್ನಡ!



ಕಾರ್ಯಕ್ರಮದ ವೀಡಿಯೊ ಲಿಂಕ್


Copyright © KCO – Brindavana

ಸಂಚಿಕೆ
೧೩
ನವೆಂಬರ್, ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಪ್ರತಿರೋಧದ ದನಿ ಮೌನವಲ್ಲ



**ಈ** ತಿಂಗಳ ಮೊದಲ ವಾರ ಅಮೆರಿಕದ ಹಾಲಿವುಡ್‌ನಲ್ಲಿ ಸುದ್ದಿಸ್ಫೋಟವೊಂದು ಸಂಭವಿಸಿತು. ಅಕ್ಟೋಬರ್ ಐದನೆಯ ತಾರೀಖು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯು ಹಾಲಿವುಡ್ ದಿಗ್ಗಜ ಹಾರ್ವಿ ವೈನ್‌ಸ್ಟಿನ್ ಮೇಲಿನ ಲೈಂಗಿಕ ಆರೋಪಗಳ ಕುರಿತು ವರದಿಯೊಂದನ್ನು ಪ್ರಕಟಿಸಿತ್ತು.

ಕಾವ್ಯ ಕಡಮೆ ನಾಗರಕಟ್ಟೆ

ಆ ವರದಿಯ ಬೆನ್ನಿನಲ್ಲೇ ಆಂಜಲಿನಾ ಜೋಲಿ, ಗ್ವೆನೆಥ್ ಪಾಲ್ಟ್ರೋ, ಆಶಲಿ ಜಡ್ ಮುಂತಾದ ಪ್ರಮುಖ ನಟಿಯರೂ ಸೇರಿದಂತೆ ನಲವತ್ತಕ್ಕಿಂಥ ಹೆಚ್ಚು ನಟಿಯರು ವೈನ್‌ಸ್ಟಿನ್ ವಿರುದ್ಧ ಲೈಂಗಿಕ ಕಿರುಕುಳ ಆರೋಪಗಳ ದೂರು ದಾಖಲಿಸಿದ್ದಾರೆ.

ಈ ಹಾರ್ವಿ ವೈನ್‌ಸ್ಟಿನ್ ಸಾಮಾನ್ಯ ನಿರ್ಮಾಪಕನಲ್ಲ, ಈತ ನಿರ್ಮಿಸಿದ ಚಿತ್ರಗಳು ಈ ತನಕ ಎಂಬತ್ತೊಂದು ಬಾರಿ ಬೇರೆ ಬೇರೆ ವಿಭಾಗಗಳಲ್ಲಿ ಆಸ್ಕರ್ ಪುರಸ್ಕಾರ ಪಡೆದಿವೆ. 1999ರಲ್ಲಿ 'ಶೇಕ್ಸ್‌ಪಿಯರ್ ಇನ್ ಲವ್' ಚಿತ್ರದ ನಿರ್ಮಾಣಕ್ಕಾಗಿ ಸ್ವತಃ ಈತನೇ ಆಸ್ಕರ್ ಪಡೆದಿದ್ದಾನೆ.

ಹೀಗಿರುವಾಗ ಅರವತ್ತೈದು ವರ್ಷ ವಯಸ್ಸಿನ ಈ ಕೋಟ್ಯಧಿಪತಿಯ ಪ್ರಭಾವಲಯ ಎಷ್ಟು ದೂರದವರೆಗೆ ಹಬ್ಬಿರಬಹುದೆಂಬುದನ್ನು ಊಹಿಸಬಹುದು. ಈ ಹಗರಣ ಬೆಳಕಿಗೆ ಬರುವ ಕೆಲವೇ ದಿನಗಳ ಹಿಂದೆ ಸಿನಿಮಾ ಕ್ಷೇತ್ರದ ದುರಿಣರಷ್ಟೇ ಅಲ್ಲದೇ ಅಮೆರಿಕಾದ ರಾಜಕೀಯ ನೇತಾರರು, ಉದ್ಯಮಪತಿಗಳು ಕೂಡ ವೈನ್‌ಸ್ಟಿನ್ ಎದಿರು ತಲೆಬಾಗುತ್ತಿದ್ದರು.

ಈ ಆರೋಪಗಳ ಸರಮಾಲೆ ಬೆಳಕಿಗೆ ಬರುತ್ತಲೇ ಎಲ್ಲರೂ ಈತನ ಸ್ನೇಹವಲಯದಿಂದ ಅಂತರ ಕಾಯ್ದುಕೊಂಡು ಮೌನವಾಗಿದ್ದಾರೆ. ಒಬಾಮಾ, ಹಿಲರಿ ಕ್ಲಿಂಟನ್ ಮುಂತಾದವರು ಸಾರ್ವಜನಿಕವಾಗಿ ವಿರೋಧಿಸಿದ್ದಾರೆ. ನಟಿ ಎಲಿಸ್ಸಾ ಮಿಲಾನೋ ಆರಂಭಿಸಿದ 'ಮೀಟೂ' ಅಂದರೆ 'ನಾನು ಕೂಡ' ಎಂಬ ಹೆಸರಿನಡಿಯಲ್ಲಿ ಜಗತ್ತಿನಾದ್ಯಂತ ಲಕ್ಷಾಂತರ ಹೆಣ್ಣುಮಕ್ಕಳು ತಾವು ಬೇರೆ ಬೇರೆ ಸಂದರ್ಭಗಳಲ್ಲಿ ಅನುಭವಿಸುವ ಲೈಂಗಿಕ ಕಿರುಕುಳದ ಕತೆಯನ್ನು ಹೇಳಿಕೊಳ್ಳುತ್ತಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ, ಕಛೇರಿಗಳಲ್ಲಿ, ಮನೆಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ಅವರು ಅನುಭವಿಸಿದ ಪಾಡು ಬೆಚ್ಚಿ ಬೀಳಿಸುವಂತಿದೆ.



ನಟಿ ನಿರ್ದೇಶಕಿ ಬರಹಗಾರ್ತಿ ಸಾರಾ ಪಾಲಿ ತನ್ನ ಒಂದು ಅನುಭವವನ್ನು ಹೀಗೆ ಹಂಚಿಕೊಂಡಿದ್ದಾಳೆ. ಕೆಲ ವರ್ಷಗಳ ಹಿಂದೆ ಒಂದಿಷ್ಟು ಜನ ಮಹಿಳಾ ನಿರ್ದೇಶಕಿಯರು ಸೇರಿ ಇಂಗ್ಲಿಷಿನಲ್ಲಿ ಒಂದು ಚಿತ್ರ ನಿರ್ಮಿಸುವ ಆಸೆ ಪಟ್ಟಿದ್ದರಂತೆ. ಎಲ್ಲರೂ ಸೇರಿ ಕಥೆ-ಚಿತ್ರಕಥೆ ಬರೆದು ಒಟ್ಟಿಗೆ ನಿರ್ದೇಶಿಸಿ ನಿರ್ಮಿಸುವ ಮಹತ್ವಾಕಾಂಕ್ಷೆಯಿಂದ ಐದಾರು ನಿರ್ದೇಶಕಿಯರು ಒಂದೆಡೆ ಸೇರುತ್ತಾರೆ.

ಸಿನಿಮಾದ ವಿಷಯ ಏನಿರಬೇಕು ಎಂಬ ಮಾತು ಬಂದಾಗ ಸಿನಿಮಾ ಜಗತ್ತಿನಲ್ಲಿ ತಾವು ಕಂಡುಂಡ ತಮ್ಮ ಸ್ವಂತ ಅನುಭವಗಳನ್ನೇ ಚಿತ್ರಕಥೆಯ ವಸ್ತುವಾಗಿಸಿ ಒಂದು ಹಾಸ್ಯಭರಿತ ಚಿತ್ರಕಥೆಯನ್ನು ತಯಾರಿಸುವುದರಲ್ಲಿ ಉತ್ಸುಕರಾಗುತ್ತಾರೆ. ಆದರೆ ಒಬ್ಬೊಬ್ಬರೇ ತಮ್ಮ ನೆನಪಿನ ಪುಟಗಳಿಂದ ಅನುಭವಗಳನ್ನು ಹೇಳಲು ಶುರು ಮಾಡಿದಾಗ ಹೇಳುತ್ತ ಹೇಳುತ್ತ ಅವರೂ, ಕೇಳುತ್ತ ಕೇಳುತ್ತ ಉಳಿದವರೂ ಕಣ್ಣೀರಾಗುತ್ತಾರೆ.

ಆ ಕಥೆಗಳಲ್ಲಿ ಹಾಸ್ಯಕ್ಕೆ ಬೇಕಾಗುವ ಸರಕು ಒಂದಿಷ್ಟೂ ಕಾಣಸಿಗದೇ ಕಸಿವಿಸಿಗೊಳ್ಳುತ್ತಾರೆ. ಆದರೆ ಆ ಕತೆಗಳ ಮಹತ್ವವನ್ನು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಲೇ ಅರಿತೆವು ಅಂತ ಸಾರಾ ಪಾಲಿ ತನ್ನ ಲೇಖನವೊಂದರಲ್ಲಿ ನೆನಪಿಸಿಕೊಂಡಿದ್ದಾಳೆ.

(ಮುಂದಿನ ಪುಟಕ್ಕೆ.....)

## "ದೇವರನ್ನು ನೋಡಿದ್ದೀರಾ ?"



**ಈ** ಪ್ರಶ್ನೆಗೆ ಉತ್ತರವನ್ನು ಯಾರೂ, ಸರಿಯಾಗಿ ಹೇಳಲಾರರು ಅಂದುಕೊಂಡರೆ, ದೇವರನ್ನು ನೋಡಿರುವ ಪುಣ್ಯ ಪುರುಷರು ಅನೇಕರಿದ್ದಾರಲ್ಲಾ ಎನಿಸಬಹುದು ಅಲ್ಲವೇ? ಹಸುಳೆ ಧ್ರುವ, ಪ್ರಹ್ಲಾದನಿಂದ ನಮಗೆ ಅತ್ಯಂತ ಸಮೀಪದಲ್ಲಿ ಪ್ರಸಿದ್ಧರಾಗಿರುವ ಶ್ರೀರಾಮಕೃಷ್ಣ ಪರಮಹಂಸರವರೆಗೆ, ಸಾಧನೆ-ತಪಸ್ಸುಗಳನ್ನು ಮಾಡಿ, ದೇವರನ್ನು ಸಾಕ್ಷಾತ್ಕಾರ ಮಾಡಿಕೊಂಡು ಪರಮಾನಂದ ಸ್ತರಕ್ಕೆ ಏರಿದ ಅನೇಕ ಮಹನೀಯರು

ಪದ್ಮ ಚಿಕ್ಕೇರೂರ್

ಇದ್ದಾರೆ. ಸ್ವಾಮಿ ವಿವೇಕಾನಂದರ "ದೇವರನ್ನು ಕಂಡಿದ್ದೀರಾ?" ಎಂಬ ಉದ್ಗಾರದಿಂದ ಗುರುಗಳನ್ನು ಹುಡುಕಿ ಹೋರಾಟ ಸನ್ನಿವೇಶ ಪ್ರತಿಯೊಬ್ಬರಿಗೂ ತಿಳಿದಿದೆ. ಅಂತೆಯೇ ಸಾಮಾನ್ಯ ಮನುಷ್ಯನಿಂದ, ವಿಜ್ಞಾನಿಯವರೆಗೂ ಈ ಜಿಜ್ಞಾಸೆ ಇದೆ. ಹಾಗಾದರೆ ದೇವರು ಎಲ್ಲಿದ್ದಾನೆ? ಎಂಬ ಪ್ರಶ್ನೆಯ ಸುಳಿಯಲ್ಲಿ ತೊಳಲಾಡುವ ಸಾಮಾನ್ಯರಿಗೆ, ಸುಲಭ ರೂಪದಲ್ಲಿ ಗೋಚರವಾಗುವಂತೆ, ಮತ್ತು ಆನಂದದಿಂದ ಪುಳುಕಿತನಾಗಲು ಇಲ್ಲಿದೆ ಒಂದು ಚಿಕ್ಕ ನಿದರ್ಶನ.

ಇದೊಂದು ಕಥೆ, ಚಂದ್ರಚೂಡ ಎಂಬ ಮಹಾರಾಜನಿಗೆ ಒಂದು ಸಲ ದೇವರಿದ್ದಾನೆಯೇ? ಇದ್ದರೆ ಈಗ ಏನು ಮಾಡುತ್ತಿರುತ್ತಾನೆ? ಯಾವ ದಿಕ್ಕನ್ನು ನೋಡುತ್ತಿರುತ್ತಾನೆ? ಎಂಬ ಪ್ರಶ್ನೆಗಳು ಸದಾ ಕಾಡುತ್ತಿದ್ದು, ತನ್ನ ಆಸ್ಥಾನದ ವಿದ್ವಾನ್ ಮಣಿಗಳನ್ನು ಕರೆಸಿ, ಈ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ಕೊಡಬಲ್ಲಿರಾ? ಎಂದು ವಿನಯದಿಂದ ಕೇಳಿಕೊಳ್ಳುತ್ತಾನೆ. ಆಸ್ಥಾನ ರಾಜಗುರುಗಳು "ನಾನು ಉತ್ತರಿಸುತ್ತೇನೆ, ಒಂದು ದಿನದ ಕಾಲಾವಕಾಶಬೇಕಿದೆ" ಎಂದು ತಿಳಿಸುತ್ತಾರೆ. ದುರದೃಷ್ಟವಶಾತ್ ಮಾರನೇ ದಿನ ರಾಜಗುರುಗಳಿಗೆ ಆಸ್ಥಾನಕ್ಕೆ ಬರಲು ಆಗುವುದೇ ಇಲ್ಲ. ಅನಾರೋಗ್ಯ ಅವರನ್ನು ಕಾಡುತ್ತದೆ. ಬಳಲಿ ಹೋಗುತ್ತಾರೆ. ಇದನ್ನು ಕಂಡ ಅವರ ಮೊಮ್ಮಗನಾದ "ವಿದ್ಯಾಧರ" ನು "ತಾತ, ನೀವು ಇಂದು ಸುಧಾರಿಸಿಕೊಳ್ಳಿ. ನೀವು ಅಪ್ಪಣೆ ಕೊಟ್ಟರೆ, ನಾನೇ ಆಸ್ಥಾನಕ್ಕೆ ಹೋಗಿ, ನಿಮ್ಮ ಸಮಸ್ಯೆಗೆ ಪರಿಹಾರಕೊಡುತ್ತೇನೆ" ಎಂದು ಕೇಳಿಕೊಳ್ಳುತ್ತಾನೆ. ರಾಜಗುರುವಿನ ಮೊಮ್ಮಗನಾದ ವಿದ್ಯಾಧರನು ನಿನ್ನೆಯಷ್ಟೇ ತಂದೆ-ತಾಯಿಯೊಂದಿಗೆ ಬೇರೆ ಊರಿಗೆ ಹೋಗಿರುತ್ತಾನೆ. ರಾಜಗುರುವಿಗೆ "ಈಗ ವಿದ್ಯಾಧರನು ಇಲ್ಲಿಗೆ ಹೇಗೆ ಬಂದಾ ?" ಎಂದು ಆಶ್ಚರ್ಯವಾದರೂ, ಬಳಲಿಕೆಯಿಂದ, ಸಂತೋಷವಾಗಿ ಆಶೀರ್ವದಿಸಿ "ಹೋಗಿ ಬಾ, ಮಗು", ಎಂದು ಆಸ್ಥಾನಕ್ಕೆ ಕಳುಹಿಸಿಕೊಡುತ್ತಾರೆ.

ರಾಜಸ್ಥಾನದಲ್ಲಿ ರಾಜಗುರುವಿನ ನಿರೀಕ್ಷಣೆಯಲ್ಲಿದ್ದ ಸಭಿಕರ ಎದುರು ವಿದ್ಯಾಧರನು - "ತಾತನಿಗೆ ಅನಾರೋಗ್ಯವೆಂದೂ, ಅವರ ಬದಲಿಗೆ ನಾನೇ ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುವೆನೆಂದು", ಬಹಳ ವಿನಯದಿಂದ ವಂದಿಸಿ ಹೇಳುತ್ತಾನೆ. ಆ ತೇಜಸ್ವಿ ಬಾಲಕನನ್ನು ನೋಡಿ ಎಲ್ಲರೂ ಹರ್ಷದಿಂದ ಸಮ್ಮತಿಸುತ್ತಾರೆ.



ರಾಜಾಜ್ಞೆಯಂತೆ ವಿದ್ಯಾಧರನು ಆಸೀನನಾಗಿ, ಪ್ರಶ್ನೆ ಏನೆಂದು ಕೇಳುತ್ತಾನೆ. ರಾಜನು ತನ್ನ ಮೊದಲ ಪ್ರಶ್ನೆ "ಭಗವಂತನು ಎಲ್ಲಿದ್ದಾನೆ?" ಎಂದು ನೇರವಾಗಿ ಕೇಳುತ್ತಾನೆ. ಇದಕ್ಕೆ ಉತ್ತರವಾಗಿ ಆ ಬಾಲಕನು ಆಸ್ಥಾನಕ್ಕೆ ಒಂದು ಪಾರಿವಾಳವನ್ನು ಮತ್ತು ಒಂದು ಕತ್ತಿಯನ್ನು ತರಿಸಿಕೊಡಬೇಕೆಂದು, ಮೊದಲು ಆ ಪಾರಿವಾಳವನ್ನು ಬಲಿ ಕೊಟ್ಟು ನಂತರ ಉತ್ತರಿಸುತ್ತೇನೆಂದು ಹೇಳುತ್ತಾನೆ. ಚಂದ್ರಚೂಡ ಮಹಾರಾಜನು, ಈ ಮಾತನ್ನು ಕೇಳಿಯೇ ತಲ್ಲಣಿಸಿ ಹೋಗಿ "ವಿನಾಕಾರಣ ಸಾಧು ಪ್ರಾಣಿಯನ್ನು ಬಲಿ ಕೊಡುವುದೇ?ಬೇಡ, ಬೇಡ"-ಎಂದು ಆರ್ತನಾಗಿ ನುಡಿಯುತ್ತಾನೆ. ಆಗ ಬಾಲಕನು ಮಹಾರಾಜ ಬಲಿಕೊಡುವ ಮಾತಿಗೆ ತಲ್ಲಣಿಸಿದ ನಿಮ್ಮ ಮನಸ್ಸಿನಲ್ಲಿ ಅದೆಷ್ಟು ಕರುಣೆ ತುಂಬಿದೆ ! ಹಾಗೆ "ಕರುಣೆ ಎಲ್ಲಿ ಇರುತ್ತದೋ ಅಲ್ಲಿ ಭಗವಂತನಿರುತ್ತಾನೆ". ನಾನು ನಿದರ್ಶನದ ಮೂಲಕ ತಿಳಿಸೋಣವೆಂದು ಸುಮ್ಮನೆ ಪಾರಿವಾಳವನ್ನು ಕೇಳಿದೆ ಎಂದು ತಿಳಿಸುತ್ತಾನೆ.

(ಮುಂದಿನ ಪುಟಕ್ಕೆ.....)


Copyright © KCO – Brindavana

ಸಂಚಿಕೆ
೧೩
ನವೆಂಬರ್, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಪ್ರತಿರೋಧದ ದನಿ ಮೌನವಲ್ಲ

(.. ಹಿಂದಿನ ಪುಟದಿಂದ)

ಜೊತೆಗೆ ಈ ಕಥೆಗಳಿಗೆ ಪರ್ಯಾಯವಾಗಿ ಇನ್ನೊಂದು ಪ್ರಶ್ನೆಯೂ ನಾಗರಿಕ ಸಮಾಜದಲ್ಲಿ ತಲೆ ಎತ್ತಿದೆ. ಅದು ಈ ಹೆಣ್ಣುಮಕ್ಕಳು ಇಷ್ಟು ದಿನ ಏಕೆ ಮೌನವಾಗಿದ್ದರು ಎಂಬುದರ ಕುರಿತಾದುದು. ಇಷ್ಟು ದಿನ ಸುಮ್ಮನಿದ್ದು ಈಗ ಒಮ್ಮೆಲೇ ಸಾವಿರದ ಸಂಖ್ಯೆಯಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿರುವ ಈ ಮಹಿಳೆಯರು ಪ್ರಚಾರಕ್ಕಾಗಿ ಹಾಗೆ ಮಾಡುತ್ತಿರಬಹುದೇ ಎಂಬ ವಾದವೂ ತಲೆ ಎತ್ತಿದೆ. ನೊಂದ ಹೆಣ್ಣುಗಳು ತಮ್ಮ ನೋವನ್ನು ಅನಾವರಣಗೊಳಿಸುವುದರ ಜೊತೆಗೆ 'ನೀವು ಸ್ತ್ರೀವಾದಿಗಳಲ್ಲ, ಸ್ತ್ರೀನಾರ್ಥಿಗಳು' ಎಂಬ ಮೂದಲಿಕೆಯನ್ನೂ ಕೇಳಬೇಕಾಗಿದೆ.

ಹಾಗಾದರೆ ಲೈಂಗಿಕ ಕಿರುಕುಳಕ್ಕೊಳಗಾದ ಹೆಣ್ಣು ಏಕೆ ತಕ್ಷಣ ಪ್ರತಿಭಟಿಸದೇ ಮೌನವಾಗಿರುತ್ತಾಳೆ? ಆಕೆಗೆ ಆ ಮೌನವನ್ನು ದಯಪಾಲಿಸಿದವರು ಯಾರು? ಇಲ್ಲಿಯ ತನಕ ಗಂಡು ಹೆಣ್ಣಿನ ನಡುವಿನ ಸಂಘರ್ಷದ ವಿಷಯವಾಗಿ ನಾವು ಕೇಳುತ್ತ ಬಂದ ಹುಲಿ-ಹುಲ್ಲೆ, ಬೆಂಕಿ-ಬೆಣ್ಣೆ, ಮುಳ್ಳು-ಸೆರಗು ಮುಂತಾದ ಕಟ್ಟುಕತೆಗಳ ಸೆರಗಿನಲ್ಲಿ ಈ ಮೌನ ಜನ್ಮ ತಾಳಿದೆ. ಆಕ್ರಮಿಸಿವವನು ಗಂಡು, ಸಹಿಸುವವಳು ಹೆಣ್ಣು - ಎಂಬ ಇನ್ನೊಂದು ಸುಳ್ಳಿನಲ್ಲಿ ಆ ಮೌನದ ಬೇರು ಅಡಕವಾಗಿದೆ. ಕಿರುಕುಳದ ವಿಷಯವಾಗಲಿ, ಲೈಂಗಿಕ ಸಂಗತಿಗಳ ಕುರಿತಾಗಲಿ ಮಾತನಾಡುವುದೇ ಅವಮಾನದ, ಲಜ್ಜೆಯ ವಿಷಯ ಎಂಬ ಮಿಥ್ಯೆಯಲ್ಲಿ ಆ ಮೌನ ಉಸಿರಾಡುತ್ತಿದೆ.

ಈ ಸುಳ್ಳುಗಳ ಭ್ರಾಂತಿಯಲ್ಲೇ ಬೆಳೆದ ಹೆಣ್ಣು ಯಾರೇ ತನ್ನನ್ನು ಲೈಂಗಿಕವಾಗಿ ಬಳಸಿಕೊಂಡರೂ ಅದು ತನ್ನದೇ ತಪ್ಪು ಎಂಬಂತೆ ದೂರವಿರತೊಡಗುತ್ತಾಳೆ, ರಾಜಿಯಾಗುತ್ತಾಳೆ, ಖಿನ್ನತೆಗೆ ಜಾರುತ್ತಾಳೆ ಅಥವಾ ಆ ಕುರಿತು ಮಾತನಾಡುವುದೇ ಒಂದು ಅಪರಾಧವೆಂಬಂತೆ ಮೌನ ಧರಿಸುತ್ತಾಳೆ.




ಇತ್ತೀಚೆಗೆ ಹೆಣ್ಣುಮಕ್ಕಳು ತಮ್ಮ ಮೇಲೆ ನಡೆದ ಕಿರುಕುಳಗಳ ಕುರಿತು ಭಾರೀ ಸಂಖ್ಯೆಯಲ್ಲಿ ಮಾತನಾಡತೊಡಗಿದಂತೆ ಅದನ್ನು ಗಂಡು-ಹೆಣ್ಣುಗಳ ನಡುವೆ ನಡೆಯುತ್ತಿರುವ ಯುದ್ಧದಂತೆ ಬಿಂಬಿಸಲಾಗುತ್ತಿದೆ. ಆದರೆ ನೈಜದಲ್ಲಿ ಅದು ಗಂಡು-ಹೆಣ್ಣುಗಳಿಬ್ಬರನ್ನೂ ಸಮಾನವಾಗಿ ಕಾಣುವ ಮತ್ತು ಕಾಣಲಾರದ ಮನಃಸ್ಥಿತಿಗಳ ನಡುವಿನ ಸಮರ. ಇಲ್ಲಿ ಗಂಡು-ಹೆಣ್ಣುಗಳಿಬ್ಬರೂ ವಿರುದ್ಧ ದಿಕ್ಕಿನಲ್ಲಲ್ಲ, ಬದಲಾಗಿ ಒಂದೇ ಬದಿಗಿದ್ದಾರೆ; ಮತ್ತವರ ವಿರುದ್ಧವಾಗಿ ಹಿಂಸೆ-ಕ್ರೌರ್ಯಗಳನ್ನೇ ಮೈಗೂಡಿಸಿಕೊಂಡ ವಿಕೃತ ಮನಃಸ್ಥಿತಿಯಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ.

ಅದೇ ಕಾರಣಕ್ಕಾಗಿ ಈ ಅಂತರ್ಯುದ್ಧವನ್ನು ಗೆಲ್ಲಲು ಹೆಣ್ಣಿಗೆ ತನ್ನ ಆತ್ಮಸ್ಥೈರ್ಯದ ಜೊತೆಗೆ ಗಂಡಿನ ಸಹಕಾರವೂ ಬೇಕು. ಈ ಸಂಧಿಕಾಲದಲ್ಲಿ ಎಲ್ಲರೂ ಒಂದಾಗಿ ಲೈಂಗಿಕ ಕಿರುಕುಳದ ಬಗ್ಗೆ ಎಚ್ಚರ ಮೂಡಿಸಬೇಕಿದೆ. ಎಳವೆಯಿಂದಲೇ ಮಕ್ಕಳಿಗೂ ಒಳ್ಳೆಯ ಮತ್ತು ಕೆಟ್ಟ ಸ್ಪರ್ಶ(ಗುಡ್ ಟಚ್- ಬ್ಯಾಡ್ ಟಚ್)ಗಳ ನಡುವಿನ ವ್ಯತ್ಯಾಸವನ್ನು ತಿಳಿಸಬೇಕಿದೆ.

ಪರಸ್ಪರ ಸಮ್ಮತಿಯಿಲ್ಲದೇ ಯಾವುದೇ ರೀತಿ ಲೈಂಗಿಕವಾಗಿ ಮುಂದುವರೆದರೂ, ಅದು ಗಂಡ-ಹೆಂಡತಿಯರ ನಡುವಾದರೂ ಸರಿ, ಕಿರುಕುಳವಾಗುತ್ತದೆ ಎಂಬ ಸರಳ ಸತ್ಯವನ್ನು ಚಿತ್ರ-ವಿಚಿತ್ರವಾಗಿ ತಿರುಚಿ ಸುಖ ಪಡುವುದರಲ್ಲಿ ಯಾವುದೇ ಅರ್ಥವಿಲ್ಲ. ವಾದವೊಂದು ಶುರುವಾದಾಗ ಅದಕ್ಕೆ ಪ್ರತಿವಾದ ಹುಟ್ಟುವುದು ಸಹಜ.

ಪ್ರಜಾಪ್ರಭುತ್ವವನ್ನು ಗೌರವಿಸುವ ದೇಶದಲ್ಲಿ ಅದು ಸಮಂಜಸವೂ ಹೌದು. ಆದರೆ ಅದೇ ಮೊಂಡುವಾದವಾಗುವುದರಲ್ಲಿ ಅರ್ಥವಿಲ್ಲ. ಪ್ರತಿಯೊಬ್ಬ ಮನುಷ್ಯನೂ - ಗಂಡಾಗಲಿ, ಹೆಣ್ಣಾಗಲಿ, ತೃತೀಯಲಿಂಗಿಯಾಗಲಿ ಪರಸ್ಪರ ಗೌರವಕ್ಕೆ ಅರ್ಹರು ಎಂಬ ಭಾವನೆ ನಮ್ಮ ಸಾಮಾಜಿಕ ಪರಿಸರದಲ್ಲಿ, ಸಂಸ್ಕೃತಿಯಲ್ಲಿ ಬೆರೆತು ಹೋಗುವ ತನಕ ಈ ಸಂಕಟ ತಪ್ಪಿದ್ದಲ್ಲ.

ಹೀಗೆಂದು ಸಮಾಜದಲ್ಲಿ ಬದಲಾವಣೆ ದಿಢೀರನೆ ಬರಲು ಸಾಧ್ಯವಿಲ್ಲ ಎಂಬುದೂ ಅಷ್ಟೇ ಸತ್ಯ. ಬಿರುಗಾಳಿಯಂತೆ ಬಂದ ಬದಲಾವಣೆ ಅಷ್ಟೇ ಬೇಗ ಕರಗಿಹೋಗುವ ಭ್ರಮೆಯಂತೆಯೇ ಸರಿ. ಹಂತಹಂತವಾಗಿ, ನಿಧಾನವಾಗಿ ಮೂಡುವ ಬದಲಾವಣೆ ಬಹುಕಾಲ ನಿಲ್ಲುವಂಥದ್ದು. ಆದರದು ತನ್ನಿಂದ ತಾನೇ ನಿರ್ಮಾಣವಾಗದು.

ಒಂದೊಂದೇ ಇಟ್ಟಿಗೆಯನ್ನಿಟ್ಟು ಮನೆಯ ಕಟ್ಟಿದಂತೆ ಒಂದೊಂದೇ ಸತ್ಯಕಥೆಯನ್ನು, ಒಂದೊಂದೇ ನೈಜ ಅನುಭವವನ್ನು ಮಾತಿನ ಮೂಲಕ, ಬರಹಗಳ ಮೂಲಕ ಹಂಚಿಕೊಳ್ಳುತ್ತ ಹೋದಾಗ ಮಾತ್ರ ಮುಂದಿನ ಪೀಳಿಗೆಗಾಗಿ ಸುರಕ್ಷಿತ ಪರಿಸರವ ನಿರ್ಮಿಸಬಲ್ಲೆವು.

'ಈ ವಿಷಯವಾಗಿ ನಾವಲ್ಲದೇ ಮತ್ಯಾರು ಮಾತಾಡೋಕೆ ಸಾಧ್ಯ' ಎಂಬ ಭಾವನೆ ಸಾಮಾಜಿಕವಾಗಿ ಅನುಕೂಲವುಳ್ಳವರಿಗೆ ಬರಬೇಕು. ಆಗ ಮಾತ್ರ ನಾವು ಧ್ವನಿಯಿಲ್ಲದವರಿಗೂ ಧ್ವನಿ ಎತ್ತಲು ಉತ್ತೇಜಿಸಬಲ್ಲೆವು. ಪ್ರತಿರೋಧದ ದನಿ ಅದು ಶುದ್ಧ ಸರಳ ಧಾರಾಳ ಸಂವಹನ. ಪ್ರತಿರೋಧದ ದನಿ ಖಂಡಿತ ಮೌನವಲ್ಲ

●

## "ದೇವರನ್ನು ನೋಡಿದ್ದೀರಾ ?"

(.. ಹಿಂದಿನ ಪುಟದಿಂದ)

ಎರಡನೇ ಪ್ರಶ್ನೆ "ಭಗವಂತ ಯಾವ ದಿಕ್ಕನ್ನು ನೋಡುತ್ತಿರುತ್ತಾನೆ?" ಎಂದು ಕೇಳಿದಾಗ ವಿದ್ಯಾಧರನು ಆಸನದಿಂದ ಇಳಿದು ಸಭೆಗೆ ವಂದಿಸಿ - ಮಹಾರಾಜನ ಹತ್ತಿರ ಹೋಗಿ, ಒಂದು ದೀಪದ ಕಂಬ ತರಿಸಿ ದೀಪ ಹಚ್ಚಿ- ಸಭಿಕರನ್ನು ಉದ್ದೇಶಿಸಿ, ಈ ದೀಪದ ಬೆಳಕು ಯಾವ ದಿಕ್ಕನ್ನು ನೋಡುತ್ತಿದೆ? ಎಂದು ಪ್ರಶ್ನಿಸಿ, ಈ ಬೆಳಕಿನಂತೆ ಭಗವಂತನು ಸದಾಕಾಲ ಎಲ್ಲಾ ದಿಕ್ಕನ್ನು ನೋಡುತ್ತಿರುತ್ತಾನೆಂದು ಸಮಾಧಾನಕರ ಉತ್ತರ ಹೇಳುತ್ತಾನೆ.

ಮೂರನೇ ಪ್ರಶ್ನೆ "ಭಗವಂತನು ಈಗ ಏನು ಮಾಡುತ್ತಿರುತ್ತಾನೆ?" ಎಂಬ ಚಂದ್ರಚೂಡನ ಪ್ರಶ್ನೆಗೆ ವಿದ್ಯಾಧರ ಬಾಲಕನು "ಮಹಾರಾಜ ಕ್ಷಮಿಸಬೇಕು" ಈಗ ನಾನು ಹೇಳುವುದು ನಿಮಗೆ ಬೇಜಾರಾಗಬಹುದು, ದಯಮಾಡಿ " ಒಂದು ಕ್ಷಣಕಾಲ ತಮ್ಮ ಸಿಂಹಾಸನದಲ್ಲಿ ಕುಳಿತುಕೊಳ್ಳಲು ನನಗೆ ಅವಕಾಶ ಕೊಡಬೇಕು, ಅಲ್ಲಿ ಕುಳಿತು ನಿಮ್ಮ ಪ್ರಶ್ನೆಗೆ ಉತ್ತರಿಸುತ್ತೇನೆ, ಎಂದು ವಂದಿಸಿ ಹೇಳಿ, ರಾಜದಂಡ ಹಿಡಿದು ಸಿಂಹಾಸನದಲ್ಲಿ ಠೀವಿಯಿಂದ ಕುಳಿತ ವಿದ್ಯಾಧರನು "ಮಹಾಮಂತ್ರಿಗಳೇ...ಇದು ರಾಜಾಜ್ಞೆ, ಈ ಕೂಡಲೇ ರಾಜಬೊಕ್ಕಸದಲ್ಲಿರುವ ಸಮಸ್ತ ವಸ್ತುಗಳನ್ನು ಬಡವರಿಗೆ ಹಂಚಿಬಿಡಿ. ಆಹಾರವನ್ನೆಲ್ಲ ಹಸಿದವರಿಗೆ ಹಂಚಿರಿ, ಮತ್ತು ಈ ಅರಮನೆಯನ್ನು ಅನಾಥರಿಗೆ ಆಶ್ರಯತಾಣವನ್ನಾಗಿ ಮಾಡಿಕೊಡಿ, ಹೂಂ...ಏಳಿ... ಏಳಿ" ಎಂದು ಘೋಷಿಸುತ್ತಾನೆ. ತಕ್ಷಣ ಮಹಾರಾಜನು, ಮಂತ್ರಿಗಳು, ಸೇನಾಧಿಪತಿಗಳು ತತ್ತರಿಸಿ ಹೋಗುತ್ತಾರೆ. ಒಬ್ಬರ ಮುಖವನ್ನು ಒಬ್ಬೊರೂ ನೋಡಿಕೊಳ್ಳುತ್ತಾರೆ. ಕೂಡಲೇ ವಿದ್ಯಾಧರನು ಸಿಂಹಾಸನದಿಂದ ಇಳಿದು "ಮಹಾರಾಜ ಕ್ಷಮಿಸಬೇಕು, ಭಗವಂತನು ಸಾಮಾನ್ಯನನ್ನು ಚಕ್ರವರ್ತಿಯನ್ನಾಗಿಯೂ, ಚಕ್ರವರ್ತಿಯನ್ನು ನಿರ್ಗತಿಕನನ್ನಾಗಿಯೂ, ಕ್ಷಣಮಾತ್ರದಲ್ಲಿ ಮಾಡಬಲ್ಲನು. ಸದಾಕಾಲವೂ ತನ್ನ ಭಕ್ತರನ್ನು ಕಾಪಾಡುತ್ತಿರುವ, ರಕ್ಷೆ ನೀಡುತ್ತಿರುವ, ಆ ದೇವ-ದೇವನು ಈಗ ಏನು ಮಾಡುತ್ತಿರುಬಹುದೆಂದು ನೀವೇ ತಿಳಿದುಕೊಂಡಿರಿ, ಭಕ್ತರನ್ನು ಉದ್ಧರಿಸುವ ಸಮಸ್ತ ಜೀವಕೋಟಿಯನ್ನು ರಕ್ಷಿಸುವ ಆ ಪರಶಿವನ ಲೀಲೆಯನ್ನು ಏನೆಂದು ಹೇಳೋಣ" ಎಂದು ನಗುಮುಖದಿಂದ ಉತ್ತರಿಸಿದನು.

ಅದೇ ವೇಳೆಗೆ ಊರಿಗೆ ಹೋಗಿದ್ದ ರಾಜಗುರುವಿನ ಮೊಮ್ಮಗ ವಿದ್ಯಾಧರನು ತಂದೆ, ತಾಯಿ– ತಾತನೊಂದಿಗೆ ಆಸ್ಥಾನಕ್ಕೆ ಬಂದಾಗ ಎಲ್ಲರಿಗು ಪರಮಾಶ್ಚರ್ಯ, ಇಬ್ಬರು ವಿದ್ಯಾಧರರು!!, ಇದು ಹೇಗೆ? ಉತ್ತರವಿತ್ತ ಬಾಲಕ ಮತ್ತಾರೂ ಅಲ್ಲ, ಸಾಕ್ಷಾತ್ ಪರಶಿವನೇ ಬಾಲಕನ ರೂಪದಲ್ಲಿ ಬಂದು ರಾಜಗುರುವಿನ ತೊಳಲಾಟವನ್ನು ತಪ್ಪಿಸುತ್ತಾನೆ. ಇದನ್ನು ಪ್ರತ್ಯಕ್ಷವಾಗಿ ಕಂಡ ಸಭಿಕರೆಲ್ಲರೂ ಪರಮೇಶ್ವರನ ದಿವ್ಯ ಸಾನಿಧ್ಯದಿಂದ ಧನ್ಯತೆಯ ಭಾವದಲ್ಲಿ ಮುಳುಗುತ್ತಾರೆ.

●


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ರಸ ಪ್ರಶ್ನೆ ?

ಬೃಂದಾವನ ವಾಣಿಯ ಈ ಸಂಚಿಕೆ ಓದಿದ ಮೇಲೆ, ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ ಮತ್ತು ಬೃಂದಾವನ ಮಕ್ಕಳೋತ್ಸವ ಕಾರ್ಯಕ್ರಮದಲ್ಲಿ ಬಹುಮಾನ ಗೆಲ್ಲಿರಿ !!! (ಉತ್ತರಗಳೆಲ್ಲ ಈ ಸಂಚಿಕೆಯಲ್ಲಿವೆ !!) 🙂

ಉತ್ತರಗಳನ್ನು ಡಿಸೆಂಬರ್ ೦೭,೨೦೧೭ ಒಳಗೆ ಇಮೇಲ್ ಮಾಡಿ :
**vani@brindavana.org**

ಒಬ್ಬರಿಗೆ ಒಂದೇ ಪ್ರವೇಶ : ಉತ್ತರದ ಜೊತೆಗೆ ನಿಮ್ಮ ಹೆಸರು, ಫೋನ್ ನಂಬರ್ ಕಳಿಸಿ. .

೧. ಧರ್ಮವಾಣಿಯ ಸಾರಾಂಶವನ್ನು ಯಾವ ಕವನದೊಂದಿಗೆ ಹೋಲಿಸಿದ್ದಾರೆ ?
೨. ಲೇಖಕರ ಅಜ್ಜಿ ಯಾವ ಅಕ್ಕಿಯನ್ನು ಬಳಸಿ ಕಜ್ಜಾಯ ಮಾಡುತ್ತಿದ್ದರು?
೩. 'ಭಗವಂತ ಯಾವ ದಿಕ್ಕಿನಲ್ಲಿ ನೋಡುತ್ತಿರುತ್ತಾನೆ?' ಎಂಬ ಪ್ರಶ್ನೆಗೆ ಬಾಲಕ ಕೊಟ್ಟ ಉದಾಹರಣೆ ಏನು?
೪.ಕನ್ನಡ ಚಿತ್ರರಂಗದ ಮೊದಲ ಚಲನಚಿತ್ರ ಯಾವುದು ಮತ್ತು ಯಾವಾಗ ಬಿಡುಗಡೆ ಆಯಿತು?

***ಬೃಂದಾವನ ವಾಣಿ ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ.**

## ನಾವು ನೋಡಿದ ಸಿನೆಮಾ







ಬಿಂದಾಸ್ ಬಳಗ





ಬಿಂದು ಪಾಲಾಕ್ಷಪ್ಪ







## ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಕೂಟ ,ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿದ್ಯಾರ್ಥಿ ಸದಸ್ಯತ್ವಗಳಲ್ಲಿ ,ನಿಮಗೆ ಸೂಕ್ತವಾದ ಸದಸ್ಯತ್ವವನ್ನು ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ. www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ. ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವದ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.
ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.
ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಎಲ್ಲರೂ ಸೇರಿ ಕನ್ನಡ ತಾಯಿ ಭುವನೇಶ್ವರಿಯನ್ನು ಆರಾಧಿಸಿ, ಕನ್ನಡದ ಕಂಪನ್ನು ಹರಡೋಣ.

**ಸೂಚನೆ:**

ನ್ಯೂಜೆರ್ಸಿಯ ಮತ್ತು ಸಮಸ್ತ ಕನ್ನಡದ ಸ್ನೇಹಿತರೆಲ್ಲರೂ "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ. ವಾಣಿಯಲ್ಲಿ ಮೂಡಿಬರುವ ಅಂಕಣಗಳು-ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ, ಬಾಲಪ್ರತಿಭೆ, ಕ್ರೀಡ, ಅಮೆರಿಕಾ ನಾ ಕಂಡಂತೆ, ಯುವ ವಾಣಿ, ಸುತ್ತ-ಮುತ್ತ, ಹಾಗೇ ಸುಮ್ಮನೆ.. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ಅಮೆರಿಕಾ ನಾ ಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.
ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ, ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. 'ಬೃಂದಾವನ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.

'ಬೃಂದಾವನ ವಾಣಿ' ಮತ್ತು 'ಬೃಂದಾವನ' ಕನ್ನಡ ಕೂಟ ಯಾವುದೇ ಒಂದು ರಾಜಕೀಯ ಪಕ್ಷವನ್ನು , ಧರ್ಮವನ್ನು ಅಥವಾ ಪಂಗಡವನ್ನು ಪ್ರತಿನಿಧಿಸುವುದಿಲ್ಲ . ನಮ್ಮ ಧ್ಯೇಯ ಕರ್ನಾಟಕ ರಾಜ್ಯ, ಕನ್ನಡ ಭಾಷೆ , ಸಂಸ್ಕೃತಿ ಹಾಗು ಕನ್ನಡಿಗರ ಅಭ್ಯುಧಯ ಮಾತ್ರ.


Copyright © KCO – Brindavana




**ಸ್ಪರ್ಧೆಗಳು:**
ಕನ್ನಡ ಕಸರತ್ತು
ಬೃಂದಾವನ ಐಡಲ್
ವೇಷಭೂಷಣ ಸ್ಪರ್ಧೆ
ಚಿತ್ರಕಲಾ ಸ್ಪರ್ಧೆ

**Competitions:**
Kannada Kasarattu
Brindavana Idol
Fancy Dress
Drawing Competition

**ಸಾಂಸ್ಕೃತಿಕ ಕಾರ್ಯಕ್ರಮಗಳು :**
ನೃತ್ಯ, ನಾಟಕ, ವಾದ್ಯ ಸಂಗೀತ, ಹಾಡು ಮುಂತಾದ ಕಲೆಗಳನ್ನು ಪ್ರದರ್ಶಿಸಬಹುದು.
ಪ್ರತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರ ಸಂಖ್ಯೆ ಮೂರಕ್ಕೂ ಹೆಚ್ಚಾಗಿರಬೇಕು.
ನಿಮ್ಮ ಐಟಂ ಅವಧಿಯನ್ನು 5 ನಿಮಿಷಗಳಿಗೆ ಮಿತಿಗೊಳಿಸಿ.
ಭಾಗವಹಿಸುವವರು ಬೃಂದಾವನ ಸದಸ್ಯರಾಗಿರಬೇಕು

**Cultural Programs :**
Performing arts such as dance, plays/skits, instrumental music, singing, etc.
Each event should have minimum 3 participants
Limit your item duration to less than 5 minutes
Participants must be Brindavana members

**ಸಲ್ಲಿಸಬೇಕಾದ ವಿವರಗಳು:**
ಭಾಗವಹಿಸುವವರ ಹೆಸರುಗಳು
ಇಮೇಲ್, ಸಂಪರ್ಕ ಫೋನ್ ಸಂಖ್ಯೆ
ಉದ್ದೇಶಿತ ಕಾರ್ಯಕ್ರಮಗಳ ವಿವರಗಳು
ಬೇಕಾಗುವ ಸಮಯ, ಅಗತ್ಯವಿರುವ ಸೌಲಭ್ಯಗಳು
ಸಂಗೀತ ಟ್ರ್ಯಾಕ್, ಕರೋಕೆ ಹಂಚಿಕೊಳ್ಳಿ.

**Details to be submitted:**
Participants names
Email, Contact phone number
Proposed event details
Time required , Facilities required
Share the music tracks, Karoke etc

ಭಾಗವಹಿಸುವವರು ತಮ್ಮ ಉಡುಗೆ, ಪ್ರಸಾಧನ, ನುಡಿಸುವಿಕೆ, ಸಂಗೀತ ಇತ್ಯಾದಿಗಳಿಗೆ ಜವಾಬ್ದಾರರಾಗಿರುತ್ತಾರೆ. ನಾವು ಅಗತ್ಯವಾದ ಮೂಲಸೌಕರ್ಯ ಧ್ವನಿ, ಬೆಳಕು, ಮೈಕ್ರೊಫೋನ್ ಮತ್ತು ಸ್ಟೇಜ್ ಸಂಬಂಧಿತ ಸೌಲಭ್ಯಗಳನ್ನು ಒದಗಿಸುತ್ತೇವೆ.

Participants are responsible for their dress, make up, instruments, music, etc. We will provide required infrastructure sound, light, microphone and stage related

**" First come, First preference "**

To participate in program or competition please send entries to **cultural@brindavana.org by November 20th**

- ಮಕ್ಕಳಿಗಾಗಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳು
- ನಾದ ಬೃಂದಾವನ (ಮಕ್ಕಳಿಂದ ಕನ್ನಡ ಹಿರಿಮೆ, ಶಾಸ್ತ್ರೀಯ/ಲಘು ಸಂಗೀತ)
- ನೃತ್ಯ ಬೃಂದಾವನ ( ನ್ಯೂ ಜೆರ್ಸಿ ಕನ್ನಡ ನೃತ್ಯ ಶಿಕ್ಷಕರ ವಿದ್ಯಾರ್ಥಿಗಳಿಂದ "ಕನ್ನಡ ಹಿರಿಮೆ" ವಿಶೇಷ ನೃತ್ಯ ರೂಪಕ )
- ಬೃಂದಾವನ ಕನ್ನಡ ಶಾಲೆಯ ಮಕ್ಕಳಿಂದ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ
- ಮನರಂಜನಾ ಕಾರ್ಯಕ್ರಮಗಳು
- ರೇಷ್ಮೆಯಲ್ಲಿ ಕನ್ನಡ ಬೆಡಗಿಯರು (ವಿಶೇಷ ಫ್ಯಾಷನ್ ಶೋ)
- ಯುವ ಬೃಂದಾವನ (ಲೀಡರ್ ಶಿಪ್ ಡೆವಲಪ್ಮೆಂಟ್ ಪ್ರೋಗ್ರಾಮ್)
- ಬೃಂದಾವನ ಚಾರಿಟಿ (ಮಕ್ಕಳಿಗಾಗಿ ಮಕ್ಕಳಿಂದ)

ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಸ್ಪರ್ಧೆಗಳಲ್ಲಿ ಭಾಗವಹಿಸಲಿಚ್ಛಿಸುವವರು,
ನವೆಂಬರ್ 20ರ ಒಳಗೆ cultural@brindavana.org ಗೆ ಈ-ಮೇಲ್ ಮಾಡಿ

| Event Registration Donation | Makkalotsava & Annual Day | |
|---|---|---|
| | Adult | Kids (5to12) |
| KCOB Mebmers | 15 | 5 |
| Non Members | 20 | 5 |
| Kannada Abhimaani Sponsorship - For Family USD100 | | |
| For registration visit www.brindavana.org | | |

**380 Cranbury Rd, East Brunswick, NJ 08816**
www.brindavana.org | info@brindavana.org


Copyright © KCO – Brindavana